ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೮ ಜೂನ್-೨೦೦೮ ಸಂಚಿಕೆ-೧೧



ಕರ್ನಾಟಕದ ಚುನಾವಣೆ ಒಂದು ಅಭಿಪ್ರಾಯ

ಜನಪದ ವಿಚಾರದಲ್ಲಿ

ಜೂನ್–೨೦೦೮

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಜೂನ್ - ೨೦೦೮
ಸಂಪುಟ - ೮
ಸಂಚಿಕೆ - ೧೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್ ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೬ ೩೧೯೩೪೪
e-mail - janapada@yahoo.com

ಎಲುಬಿನ ಹಂದರದೊಳಗೆ

ನಮ್ಮ ಎಲುಬಿನ ಹಂದರದೊಳಗೊಂದು
ಮಂದಿರವಿದೆ: ಉಚ್ವಾಸ ನಿಶ್ವಾಸಗಳ
ಓಂಕಾರವಿದೆ, ಅಲ್ಲಿ ರಾಮನಿದ್ದಾನೆ.

ನಮ್ಮ ಎಲುಬಿನ ಹಂದರದೊಳಗೊಂದು
ಮಸೀದಿಯಿದೆ, ಅಗೊ ಮೇಲೆ ನೋಟ ನಕ್ಷತ್ರ
ಕಣ್ಣಲಗೆ ಚಂದಿರ: ಅಲ್ಲಿದ್ದಾನೆ ಅಲ್ಲಾ.

ನಮ್ಮ ಎಲುಬಿನ ಹಂದರದೊಳಗೊಂದು
ಇಗರ್ಜಿಯಿದೆ; ಅಲ್ಲದೆ ಕಶೇರು ಹೆಗಲ-
ಮೂಳೆಗಳಿಂದಾದ ಶಿಲುಬೆ,
ಅಲ್ಲಿದ್ದಾನೆ ಮೊಳೆ ಜಡಿಸಿಕೊಂಡು
ನಿತ್ಯ ಮರುಗುವ ಏಸುಕ್ರಿಸ್ತ.

ಮಸ್ತಿಷ್ಕದೊಳಗೆ ಸ್ತೂಪಗಳು
ಅಸ್ಥಿಯೊಳಗದೆಷ್ಟು ಬಸ್ತಿಗಳು
ಸದಾ ಸ್ವಸ್ಥವಿರುವ ಬುದ್ಧ ಮಹಾವೀರರು.

ಎಲುಬುಗಳ ರಕ್ಷೆಗೆಂದೇ ಮಾಂಸ
ಬೆಳೆಸಿಕೊಂಡೆವು ಶಕ್ತಿ ಸಂಚಯನಕ್ಕೆ
ರಕ್ತ ತುಂಬಿಕೊಂಡೆವು ರಕ್ತದೊಡನೆ
ದಾಹವೂ ಮಾಂಸಲದ
ಕೂಡ ದಳ್ಳುರಿಯೂ ಹುಟ್ಟಿಕೊಂಡವು.

ಮುಂದೆ ರಕ್ತ ಮಾಂಸದ ಮುದ್ದೆಗಳು
ಕ್ರೋಮೋಜೋಮುಗಳಂತೆ ಹೋರಾಡಿ
ಕೆಲವು ಮಂದಿರಗಳನೂ
ಕೆಲವು ಮಸೀದಿಗಳನೂ ಕೆಡವಿದವು,
ರಕ್ತ ಮಾಂಸದ ದೇಹಗಳುರುಳಿದವು.

ದೇಗುಲಗಳುಳಿದಿವೆ ಎಲುಬಿನ
ಹಂದರದೊಳಗೆ: ಬೆಚ್ಚನೆಯ ಭಕ್ತಿ
ಪಂಜರದೊಳಗೆ.

— **ಮೂಡ್ನಾಕೂಡು ಚಿನ್ನಸ್ವಾಮಿ**

ವಿಚಾರ ದೀಪ್ತಿ

ಪರಭಾಷೆಗಳನ್ನು ಪ್ರೀತಿಸುವ ಬದಲು ದ್ವೇಷಿಸತೊಡಗಿದರೆ, ನಾವು ಆ ಸಂಬಂಧಿತ ಒಂದು ದೊಡ್ಡ ಜ್ಞಾನನಿಧಿಯನ್ನೇ ಕಳೆದು ಕೊಳ್ಳುತ್ತೇವೆ. ಜಗತ್ತಿನ ಸರ್ವಜ್ಞಾನವೂ ಒಂದಿಲ್ಲಾ ಒಂದು ಭಾಷೆಯಲ್ಲಿ ಅಡಗಿರುವುದರಿಂದಲೇ, ಈಗ ಇಂಗ್ಲೀಷ್‌ನಲ್ಲಿಯೇ ಅದು ಹೆಚ್ಚಾಗಿರುವುದರಿಂದ ಪೈಪೋಟಿಗೆ ಪ್ರಸಿದ್ಧರಾದ ಪ್ರಗತಿಪರ ರಾಷ್ಟಗಳಾದ ಚೀನಾ, ಜಪಾನ್, ರಷ್ಯಾ, ಫ್ರಾನ್ಸ್‌ಗಳು ತಮ್ಮ ಎಂದಿನ ಉಗ್ರ ಭಾಷಾ ಪ್ರೇಮ ಬದಿಗಿಟ್ಟು ಇಂಗ್ಲಿಷ್ ಕಲಿಕೆ ಪ್ರಾರಂಭಿಸಿಯಾಗಿದೆ. ಈ ದಿಶೆಯಲ್ಲಿ ಭಾರತೀಯರು ಹಾಗೂ ವಿಶೇಷವಾಗಿ ಕನ್ನಡಿಗರು ಇತರರಿಗಿಂತ ಒಂದು ಹೆಜ್ಜೆ ಮುಂದು. ಎಲ್ಲಿಯೇ ಹೋಗಲಿ ಅಲ್ಲಿಯ ಭಾಷೆ, ಜನಜೀವನದೊಡನೆ ಬೆರೆತು ಒಂದಾಗುವ ಅವರ ಪರಿ ಇತರರಿಗೆ ಮಾದರಿಯಾಗುವಂತಹದು. ಕೋಲ್ಕತ್ತಾದಲ್ಲಿ ಕುಮಾರಪ್ಪ, ಐಯಂಗಾರ್, ದೆಹಲಿಯಲ್ಲಿ ಬಿಳಿಮಲೆ, ಸಾವುಗ ಮುಂತಾದ ಅನೇಕರು ಉದಾಹರಣೆಯಾಗಬಲ್ಲರು. ಕೋಲ್ಕತ್ತಾದಲ್ಲಿ ದೀರ್ಘಕಾಲ ನೆಲೆಸಿದ್ದರೂ ಅನೇಕ ತಮಿಳರು 'ಅಪೋನ್ ಜನ್' ಆಗದೆ 'ಅಬಂಗಾಲಿ' ಆಗಿ ಹಿಂದಿಯನ್ನೂ ಸರಿಯಾಗಿ ಕಲಿಯದೇ ತಡವರಿಸುತ್ತಾರೆ. ಕನ್ನಡಿಗರು ಮಾತ್ರ ಎಲ್ಲಿಯೂ ಇಂತಹ ಅತಂತ್ರ ಸ್ಥಿತಿ ತಲುಪುವುದಿಲ್ಲ.

ಕೊನೆಗೊಂದು ಮಾತು: ಕಾಲಮಾನದಲ್ಲಿ ಅತ್ಯಂತ ಕಿರಿಯ ಭಾಷೆಯಾಗಿರುವ ಉರ್ದು ಈಗ ಪಾಕಿಸ್ತಾನದಲ್ಲಿ ವಿಜೃಂಭಿಸುತ್ತಿದ್ದರೂ ಅದಕ್ಕೂ ಎರಡು ಶತಮಾನ ಮೊದಲೇ ದಕ್ಷಿಣದ ವಿಜಾಪುರ ಹಾಗೂ ಗೋಲ್ಕೊಂಡಗಳಲ್ಲಿ ಆಡಳಿತ ಭಾಷೆಯಾಗಿ ಪ್ರವರ್ಧಮಾನವಾಗಿತ್ತು. ಭಾರತೀಯ ಭಕ್ತಿ ಪಂಥಕ್ಕೆ ಅಪಾರ ಕೊಡುಗೆ ನೀಡಿದ ಇದು ರಾಷ್ಟೀಯ ಏಕತೆಯ ದ್ಯೋತಕವಾಗಿದೆ. 'ಹೃದಯ' (ದಿಲ್) ವೆಂಬುದಕ್ಕೆ ೬೫೦ ಹಾಗೂ 'ಪ್ರೀತಿ' ಗೆ ೩೫೦ ಸರಿಸಮಾನ ಶಬ್ದಗಳನ್ನು ಹೊಂದಿರುವ ವಿಶ್ವದ ಏಕೈಕ ಭಾಷೆ ಉರ್ದು. ಅದಕ್ಕಾಗಿಯೇ ಹಲವು ಭಾಷೆ ಕಲಿತು ಜ್ಞಾನ ಪರಿಧಿ ವಿಸ್ತರಿಸಿಕೊಳ್ಳೋಣ, ಪ್ರೀತಿಯ ಝರಿ ಹರಿಸೋಣ.

ಕರ್ನಾಟಕದ ಚುನಾವಣೆ : ಒಂದು ಅಭಿಪ್ರಾಯ

– ಸುರೇಂದ್ರ ಕೌಲಗಿ

ಭಾರತವೊಂದು ಬಹು ಜನಾಂಗೀಯ ಸಮಾಜ. ಪ್ರಜಾಪ್ರಭುತ್ವದೊಂದಿಗೂ, ಕಾನೂನು ವ್ಯವಸ್ಥೆಯೊಂದಿಗೂ ಹಾಗು ವ್ಯಕ್ತಿ ಸ್ವಾತಂತ್ರ್ಯದೊಂದಿಗೂ, ಸಮುದಾಯ ಸಂದಂಭಗಳೊಂದಿಗೂ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳೊಂದಿಗೂ ಎಂಥ ಮೋಡಿಯನ್ನು ಮಾಡುತ್ತದೆ. ಬುದ್ಧಿ ಜೀವಿಯಾಗಿ ವಾಸವಾಗಿರಲು ಅದೆಂಥ ಅದ್ಭುತ ದೇಶ! ಭಾರತವನ್ನು ಪುನರ್ ಶೋಧಿಸುವುದಕ್ಕಾಗಿ ಹತ್ತು ಬಾರಿ ಜನ್ಮವೆತ್ತಿದರೂ ನನಗೆ ಬೇಸರವಿಲ್ಲ.

– ರಾಬರ್ಟ್ ಬ್ಲಾಕವೆಲ್

ಅಮೇರಿಕದ ರಾಜದೂತ ೨೦೦೩.

ಭಾರತೀಯ ಜನತಾ ಪಕ್ಷ ಕರ್ನಾಟದಲ್ಲಿ ಅಳುತ್ತ ಅಧಿಕಾರಕ್ಕೆ ಬಂದಿದೆ. ಎದೆಗಾರಿಕೆಯಿಂದಲೂ, ದೃಢ ಸಂಕಲ್ಪದಿಂದಲೂ ಆಡಳಿತ ನಡೆಸಲು ಅಗತ್ಯವಾದ ನಿಚ್ಚಳ ಬಹುಮತ ಅದಕ್ಕೆ ದೊರೆತಿಲ್ಲ. ತನ್ನದೇ ಪಕ್ಷದ ಬಂಡಾಯ ಸ್ವತಂತ್ರ ಸದಸ್ಯರ ಕಾಲುಹಿಡಿಯಬೇಕಾದ ದುಃಸ್ಥಿತಿ ಅದಕ್ಕೊದಗಿದೆ. ಚುನಾವಣೆಯ ಮುನ್ನ ಪ್ರಚಾರ ಕಾಲದಲ್ಲಿ ಆ ಪಕ್ಷದ ನಾಯಕರ ಭಾಷಣದಲ್ಲಿದ್ದ ಉಗ್ರತೆ, ಉನ್ಮತ್ತತೆ ಮತ್ತು ಮಹತ್ವಾಕಾಂಕ್ಷೆ ಚುನಾವಣೆಯ ಫಲಿತಾಂಶ ಹೊರಬರುತ್ತಲೇ ತಮ್ಮ ತೀವ್ರತೆಯನ್ನು ಕಳೆದುಕೊಂಡು ನೈಜ ಪ್ರಪಂಚಕ್ಕೆ ಬಂದಿಳಿದವು. ದಕ್ಷಿಣ ಭಾರತದಲ್ಲಿ ಭಾರತೀಯ ಜನತಾ ಪಕ್ಷದ ಅಧ್ಯಾಯ ಪ್ರಾರಂಭವಾಯಿತೆಂದು ಆ ಪಕ್ಷದ ರಾಷ್ಟ್ರ ಮಟ್ಟದ ನಾಯಕರು ಬೀಗುತ್ತಲೇ ಇದ್ದಾರೆ. ಆದರೆ ಮುಖ್ಯಮಂತ್ರಿ ಯಡಿಯೂರಪ್ಪನವರು ತಮ್ಮ ನೈಜ ಬಹುಮತವನ್ನು ವಿಧಾನ ಸಭೆಯಲ್ಲಿ ಸಿದ್ಧ ಪಡಿಸಿದ ನಂತರವೇ ತಾವು ಎರಡೂ ಸದನಗಳ ಸಂಯುಕ್ತ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವುದಾಗಿ ರಾಜ್ಯಪಾಲರು ಹೇಳಿಕೆ ಕೊಟ್ಟ ಮೇಲಂತೂ ಚುನಾವಣೆಯಲ್ಲಿಯ ಜಯದ ಉತ್ಸಾಹ ಬಹುವಾಗಿ ಕುಗ್ಗಿತು.

ಭಾರತೀಯ ಜನತಾ ಪಕ್ಷ ಹಿಂದುತ್ವದ ಘೋಷಣೆಯೊಂದಿಗೆ ಚುನಾವಣೆಯಲ್ಲಿ ಭಾಗವಹಿಸಿತಾದರೂ, ಗುಜರಾತ್ ಮಾದರಿ ಅಭಿವೃದ್ಧಿಯನ್ನು ಕರ್ನಾಟಕದಲ್ಲೂ ಸಾಧಿಸಲಾಗುವುದೆಂದು ಸಾರಿತಾದರೂ ಇವೆರಡೂ ಅಜೆಂಡಾಗಳು ವಿರೋಧಾತ್ಮಕವಾಗಿವೆ. ಹಿಂದುತ್ವವಾದವನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರಲು ಹೊರಟರೆ ಗುಜರಾತ್ ಮಾದರಿಯ ಅಭಿವೃದ್ಧಿ ಸಾಧ್ಯವಾಗಲಾರದು. ಏಕೆಂದರೆ ಗುಜರಾತ್ ಮಾದರಿ ಅಭಿವೃದ್ಧಿಯೆಂದರೆ ನಿಜಾರ್ಥದಲ್ಲಿ ಕೇಂದ್ರ ಸರ್ಕಾರದ ಇಂದಿನ ಎಲ್ಲ ಅಭಿವೃದ್ಧಿ ಯೋಜನೆಗಳ ಶತಶಃ ಅನುಷ್ಠಾನವೇ ಆಗಿದೆ. ಇಂಥ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಕೇವಲ ಹಿಂದುತ್ವವಾಕ್ಕಾಗಲೀ, ಅಥವಾ ಇನ್ನಾವುದೇ ಧರ್ಮಾಧಾರಿತ ವಾದಕ್ಕಾಗಲೀ ಅವಕಾಶವಿರಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈಗ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿಯು ಹಿಂದುತ್ವದ ವಿಷಯದ ಮೇಲೆ ಹೆಚ್ಚು ಒತ್ತು ಕೊಡದೆ ಸಮಸ್ತ ಕರ್ನಾಟಕದ ಸರ್ವತೋಮುಖ

ಅಭಿವೃದ್ಧಿಗಾಗಿ ಶ್ರಮಿಸಬೇಕು. ತನ್ಮೂಲಕ ಬಿಜೆಪಿಗೆ ಹೊಸ ಕಾಯಕಲ್ಪ ಮಾಡಿ ಈಗ ಆ ಪಕ್ಷದ ಬಗ್ಗೆ ಭಾರತೀಯರ ಮನಸ್ಸಿನಲ್ಲಿರುವ ಗುಮಾನಿಯನ್ನು ಹೋಗಲಾಡಿಸಬೇಕು. ಈಗಾಗಲೇ ನರೇಂದ್ರ ಮೋದಿಯವರು ಗೋಧ್ರಾ ದುರ್ಘಟನೆಯ ನಿಮಿತ್ತ ಕೆಟ್ಟ ಹೆಸರನ್ನು ಪಡೆದಿದ್ದಾರೆ. ಆದ್ದರಿಂದ ಅವರ ನೇತೃತ್ವದ ಸರ್ಕಾರಕ್ಕೂ ಕಲಂಕ ಹತ್ತಿದೆ. ಗುಜರಾತ್ ಮಾದರಿ ಅಭಿವೃದ್ಧಿ ಎಂದು ಹೇಳಿದಾಗ ಜನರ ಮನಸ್ಸು ವಿಚಲಿತಗೊಳ್ಳುತ್ತದೆ. ಆದ್ದರಿಂದ ಯಡಿಯೂರಪ್ಪನವರು ಕರ್ನಾಟಕದಲ್ಲಿ ಮೋದಿ ಮಾದರಿಯ ಅಭಿವೃದ್ಧಿ ಅಥವಾ ಸರ್ಕಾರ ಬರುವುದಾಗಿ ಪದೇಪದೇ ಹೇಳಿದರೆ ಈಗ ಅವರ ಪಕ್ಷಕ್ಕೆ ಸಿಕ್ಕಿರುವ ಅಲ್ಪ ಬಹುಮತ ಕೂಡ ಕ್ರಮೇಣ ಕರಗಿ ಹೋಗುವ ಸಾಧ್ಯತೆ ಇದೆ. ಅಲ್ಲದೆ ಕರ್ನಾಟಕಕ್ಕೆ ತನ್ನದೇ ಆದ ಸ್ವಂತಿಕೆ ಇದೆ. ಈ ಸ್ವಂತಿಕೆ ಮತ್ತು ಆತ್ಮವಿಶ್ವಾಸದ ಮೇಲೆ ಯಡಿಯೂರಪ್ಪನವರು ಕರ್ನಾಟಕದಲ್ಲಿ ಆಡಳಿತ ನಡೆಸುವುದಾದರೆ ಮತ್ತು ರಾಜ್ಯ ಮಟ್ಟದ ನಾಯಕರು ದೂರದರ್ಶಿತ್ವದ ಹಾಗು ವ್ಯವಹಾರಿಕವಾದ ನಾಯಕತ್ವವನ್ನು ಕೊಡುವಲ್ಲಿ ಯಶಸ್ವಿಯಾದರೆ ಅದೊಂದು ಭಾರತದ ನೂತನ ರಾಜಕಾರಣದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿದಂತೆ. ಇಪ್ಪತ್ತನೇ ಶತಮಾನಕ್ಕೇನೇ ಮೂಲಭೂತವಾದ ಕಾಲ ಮುಗಿಯಿತು. ಇನ್ನು ಮುಂದಿನ ಇಪ್ಪತ್ತೊಂದನೇ ಶತಮಾನ ಹಾಗೂ ಅದರ ಮುಂದಿನ ಶತಮಾನಗಳು ಸರ್ವ ಧರ್ಮ ಸಮಭಾವದ ಕಾಲ. ಈ ಮಾತನ್ನು ಕರ್ನಾಟಕದ ಬಿಜೆಪಿ ಸರ್ಕಾರ ಸಿದ್ಧ ಮಾಡಿ ತೋರಿಸಿದರೆ ಮಾತ್ರ ಬಿಜೆಪಿಗೆ ದಿಲ್ಲಿ ಹತ್ತಿರವಾಗುವುದು. ಇಲ್ಲವಾದರೆ ಬಹುದೂರ. ಇತ್ತೀಚೆಗೆ ಯಡಿಯೂರಪ್ಪನವರು ದಿಲ್ಲಿಗೆ ತಮ್ಮ ಪಕ್ಷದ ಸಭೆಯಲ್ಲಿ ಭಾಗವಹಿಸಲು ಹೋದಾಗ್ಗೆ ಅಡ್ವಾಣಿ ನೈತೃತ್ವದ ಸರಕಾರವನ್ನು ದಿಲ್ಲಿಯಲ್ಲಿ ಸ್ಥಾಪಿಸುವುದೇ ತಮ್ಮ ಮುಂದಿನ ಗುರಿಯೆಂಬುದಾಗಿ ಹೇಳಿದ್ದಾರೆ. ಓರ್ವ ರಾಜಕಾರಣಿಯಾಗಿ ಅವರು ಈ ಮಾಹತ್ವಾಕಾಂಕ್ಷೆ ಹೊಂದಿರುವುದು ತಪ್ಪಲ್ಲವಾದರೂ ಈ ಗುರಿಯತ್ತ ಹೋಗುವಾಗ ಬಿಜೆಪಿ ಈ ದೇಶದ ಸಂವಿಧಾನವನ್ನೂ, ಭಾರತದ ಇಂದಿನ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನೂ ಮರೆಯಲಾಗದು. ಈಗಾಗಲೇ ಬಿಜೆಪಿ ರಾಷ್ಟ್ರ ನಾಯಕರು ಈ ದೇಶದ ಪ್ರಚಲಿತ ಸಾಮಾಜಿಕ ಹಾಗೂ ರಾಜಕೀಯ ಬಣ್ಣವನ್ನೇ ಬದಲಿಸುವ ಮಾತನ್ನು ಹೇಳುತ್ತಿದ್ದಾರೆ. ಇಂಥ ಮಾತುಗಳ ಹಿಂದೆ ಧಾರ್ಮಿಕ ಮೂಲಭೂತವಾದದ ಘಾಟು ಮೂಗಿಗೆ ಹೊಡೆಯುತ್ತದೆ. ಎಂಥದೇ ಸಾಮಾಜಿಕ ಸುಧಾರಣೆಯನ್ನು ತರಬೇಕಾದರೆ ಮೊಟ್ಟ ಮೊದಲು ಅದಕ್ಕೆ ಪೂರಕವಾದ ಜನಾಭಿಪ್ರಾಯವನ್ನು ನಿರ್ಮಿಸಿಕೊಳ್ಳ ಬೇಕಾದುದು ಅಗತ್ಯ. ಹುಂಬರಂತೆ ವೇದಿಕೆಯ ಮೇಲೆ ಕುಣಿದರೆ ಚಪ್ಪಾಳೆಯ ಬದಲಾಗಿ ಚಪ್ಪಲಿಗಳು ತೂರಿಬಂದಾವು. ಕರ್ನಾಟಕವನ್ನು ಒಂದು ಆದರ್ಶ ರಾಜ್ಯವನ್ನಾಗಿ ಮಾಡುವುದಾಗಿ ಹೇಳುತ್ತಿರುವ ಯಡಿಯೂರಪ್ಪನವರು ಏಕ ನಾಗರಿಕತೆಯಂಥ ಕ್ರಮಗಳ ವಿಷಯದಲ್ಲಿ ಕೇಂದ್ರದ ನಾಯಕರ ಸೂಚನೆಗಿಂತ ಭಿನ್ನವಾಗಿ ಪ್ರಯತ್ನಿಸುವುದು ಅಗತ್ಯ. ಏಕೆಂದರೆ ಗುಜರಾತಿಗಿಂತಲೂ ಕರ್ನಾಟಕವು "ಸರ್ವಜನಾಂಗಗಳ ಶಾಂತಿಯ ತೋಟ"ವಾಗಿದೆ. ಕರ್ನಾಟಕದಲ್ಲಿ ಸರ್ವಧರ್ಮಗಳ ಸಮನ್ವಯದ ಆಧಾರದ ಮೇಲೆ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸುವ ಕೆಲಸ ಮಾಡಿದಾಗ ಯಡಿಯೂರಪ್ಪನವರು ಬಯಸುವಂತೆ ಕರ್ನಾಟಕ ಬೇರೆ ರಾಜ್ಯಗಳಿಗೆ ಮಾದರಿಯಾಗಬಲ್ಲದು. ಈಗ

ಬಿಜೆಪಿಯಲ್ಲಿರುವುದೆಲ್ಲಾ ಶ್ರೇಷ್ಠವೆಂದು ಯಾರೂ ಹೇಳಲಾರರು. ಎಲ್ಲ ರಾಜಕೀಯ ಪಕ್ಷಗಳಲ್ಲಿಯಂತೆ ಅದರಲ್ಲೂ ಹೊಲಸು ಇದೆ. ಈಗ ತಾನೆ ಆಂಧ್ರದ ತೆಲಂಗಾಣದಲ್ಲಿ ನಡೆದ ಮಧ್ಯಕಾಲೀನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೊದಲಿಗಿಂತಲೂ ದುರ್ಬಲವಾಗಿ ಹೊರಹೊಮ್ಮಿದೆ. ಆದ್ದರಿಂದ ಬಿಜೆಪಿ ತನ್ನ ಆತ್ಮ ಪರೀಕ್ಷೆಯನ್ನು ಮಾಡಿಕೊಳ್ಳಬೇಕಿದೆ. ಅದರಲ್ಲಿಯೂ ಮುಖ್ಯವಾಗಿ ತನ್ನ ಹಿಂದುತ್ವದ ಕನ್ನಡಕವನ್ನು ಬದಲಾಯಿಸಿಕೊಳ್ಳುವುದು ಅಗತ್ಯವಾಗಿದೆ. ಇಂದು ಭಾರತಕ್ಕೆ ನಿಜವಾಗಿಯೂ ಒಂದು ಒಳ್ಳೆಯ ಪರ್ಯಾಯ ಪಕ್ಷ ಬೇಕಿದೆ. ಸುಮಾರು ನೂರೈವತ್ತು ವರ್ಷಗಳಷ್ಟು ಹಳೆಯದಾದ ಕಾಂಗ್ರೆಸ್ ಪಕ್ಷದ ಬುಡ ಟೊಳ್ಳಾಗಿದೆ. ಅದು ಬಿದ್ದು ಹೋಗುತ್ತಿರುವ ಮರ. ದೇಶದ ಆಡಳಿತಕ್ಕೆ ಪ್ರಾಣವಾಯುವನ್ನು ತುಂಬುವ ಸಂವಿಧಾನವನ್ನೇ ಕುಲಗೆಡಿಸಿದ ಪಕ್ಷ ಕಾಂಗ್ರೆಸ್.

ಇಂದು ಭಾರತಕ್ಕೆ ಸಂವಿಧಾನದ ಆಶೋತ್ತರಗಳನ್ನು ಪೂರೈಸುವ ರಾಷ್ಟ್ರೀಯ ಪಕ್ಷವೊಂದು ಬೇಕಿದೆ. ಅಂಥ ಪಕ್ಷದ ಉದಯಕ್ಕಾಗಿ ದೇಶವಾಸಿಗಳು ಕಾಯುತ್ತಿದ್ದಾರೆ. ನಿಜವಾಗಿಯೂ ಅಂಥ ಪಕ್ಷವಾಗಿ ಬಿಜೆಪಿ ತನ್ನನ್ನು ಪುನರ್‌ರಚಿಸಿಕೊಳ್ಳುವುದಾದರೆ ಅದನ್ನು ಜನ ಪ್ರೋತ್ಸಾಹಿಸಿಯಾರು. ಇದೆಲ್ಲಕ್ಕೂ ಮೊದಲು ಭಾರತದಲ್ಲಿ ಬೆಳೆಯುತ್ತಿರುವ ಭಯೋತ್ಪಾದಕತೆಯನ್ನು ತೊಡೆದು ಹಾಕಬೇಕಿದೆ.

೧೯೪೭ರಲ್ಲಿ ಭಾರತ ಸ್ವಾತಂತ್ರ್ಯ ಪಡೆದಾಗಿನಿಂದಲೂ ದೇಶದ ಒಂದಲ್ಲ ಒಂದು ಕಡೆ ಧರ್ಮಗಳ ಹೆಸರಿನಲ್ಲಿ ಮನುಷ್ಯರ ಹತ್ಯೆ ನಡೆಯುತ್ತಲೇ ಇದೆ. ಆ ಹತ್ಯಾಕಾಂಡ ನಿಲ್ಲುವ ಸಂಕೇತಗಳೇ ಕಾಣುತ್ತಿಲ್ಲ. ಕಳೆದ ಮೇ ತಿಂಗಳಲ್ಲಿ ರಾಜಸ್ಥಾನದ ಸುಂದರ ನಗರ ಜೈಪುರದಲ್ಲಿ ಒಂದೇ ದಿನ ಸರಣಿ ಪ್ರಕಾರ ಆರು ಬಾಂಬುಗಳನ್ನು ಉಗ್ರಗಾಮಿಗಳು ಸ್ಫೋಟಿಸಿ ಅರವತ್ತು ಜನರ ಸಾವಿಗೂ, ೧೫೦ ಜನರಿಗಿಂತಲೂ ಹೆಚ್ಚು ಜನರು ಗಾಯಗೊಳ್ಳುವುದಕ್ಕೂ ಕಾರಣರಾಗಿದ್ದಾರೆ. ಇಂಥದೇ ಭಯೋತ್ಪಾದಕತೆಯನ್ನು ಕರ್ನಾಟಕದ ಹುಬ್ಬಳಿಯಲ್ಲೂ, ಬೆಂಗಳೂರಿನಲ್ಲೂ ಹಾಗೂ ದೇಶದ ರಾಜಧಾನಿಯಲ್ಲೂ ಉಂಟುಮಾಡಿದ್ದರು. ಈ ಭಯೋತ್ಪಾದಕರು ಯಾರು, ಎಲ್ಲಿಂದ ಬಂದರು, ಅವರ ಸಿದ್ಧಾಂತ ಏನು, ಗುರಿ ಏನು ಎಂಬುದರ ಬಗ್ಗೆ ಸ್ಪಷ್ಟವಾದ ವಿಚಾರಗಳು ಇದುವರೆಗೂ ಅಧಿಕೃತವಾಗಿ ಗೊತ್ತಾಗಿಲ್ಲ. ಕೇವಲ ಬಾಂಬುಗಳನ್ನು ಸ್ಫೋಟಿಸುವುದು, ರಕ್ತಪಾತ ಮಾಡುವುದಷ್ಟೇ ಭಯೋತ್ಪಾದಕರ ಕೆಲಸವಾಗಿದೆ. ಕೆಲವೊಂದು ಸಲ ತಮ್ಮನ್ನು ವಿವಿಧ ಭಯೋತ್ಪಾದಕರ ಗುಂಪಿನೊಂದಿಗೆ ಹಾಗೂ ತಮ್ಮ ಯಾವುದಾದರೊಂದು ಧರ್ಮದೊಂದಿಗೆ ಸಂಬಂಧವನ್ನು ಗುರುತಿಸಿಕೊಳ್ಳುತ್ತಾ ಬಂದಿದ್ದಾರೆ. ಈ ಭಯೋತ್ಪಾದಕ ಸಂಘಟನೆಗಳ ಜೊತೆಗೆ ಕೆಲ ಭಾರತೀಯರ ಸಂಬಂಧವೂ ಇದೆ ಎಂಬುದೇ ಬಹು ದೊಡ್ಡ ಆತಂಕದ ಹಾಗೂ ಆಘಾತದ ಸಂಗತಿಯಾಗಿದೆ. ಭಯೋತ್ಪಾದಕತೆ ಜಾಗತಿಕವಾಗಿ ಬೆಳೆದಿದೆ ಮತ್ತು ಭಯೋತ್ಪಾದಕರು ಇಲ್ಲದ ದೇಶವೇ ಇಲ್ಲವಾಗಿದೆ. ವಿಶ್ವ ರಾಷ್ಟ್ರ ಸಂಸ್ಥೆಗೆ ವಿಶ್ವ ಮಟ್ಟದ ಯುದ್ಧಗಳನ್ನು ತಪ್ಪಿಸಲು ಸಾಧ್ಯವಾಗಿರಬಹುದಾದರೂ ಭಯೋತ್ಪಾದಕತೆಯ ಕಾರಣಗಳನ್ನು ನಿವಾರಿಸಲು ಮತ್ತು ಭಯೋತ್ಪಾದಕರನ್ನು ನಿಗ್ರಹಿಸಲು ಸಾಧ್ಯವಾಗಿಲ್ಲ. ಇನ್ನು ವಿಶ್ವದ ಅತ್ಯಂತ ಬಲಿಷ್ಠ ದೇಶವಾದ ಅಮೇರಿಕ ಸಂಯುಕ್ತ ಸಂಸ್ಥಾನವೂ ಕೂಡ ಭಯೋತ್ಪಾದಕರ ತಂತ್ರಕ್ಕೆ ತತ್ತರಿಸಿದೆ. ಅನೇಕ ಬಾರಿ ಆ ದೇಶವೇ ಭಯೋತ್ಪಾದಕರ ಸಂತತಿ ಬೆಳೆಯುವುದಕ್ಕೆ

ಹಾಗೂ ಅವರು ಕ್ರಿಯಾಶೀಲರಾಗುವುದಕ್ಕೆ ಕಾರಣವಾಗುತ್ತ ಬಂದಿದೆ. ಇನ್ನು ಜಗತ್ತಿನ ಇತರ ದೊಡ್ಡ ದೇಶಗಳಾದ, ರಶಿಯಾ, ಚೀಣಾ ಕೂಡ ಭಯೋತ್ಪಾದನೆಯ ಎದಿರು ಹತಾಶವಾಗಿಯೇ ಉಳಿದಿವೆ. ಪಾಕಿಸ್ತಾನ, ಬಾಂಗ್ಲಾದೇಶ, ಇರಾನ್, ಇರಾಕ್, ಆಫ್ಘಾನಿಸ್ತಾನ ಮುಂತಾದ ದೇಶಗಳಂತೂ ಭಯೋತ್ಪಾದನೆಯನ್ನು ನೀರೆರದು ಬೆಳಸುತ್ತಿವೆ ಮತ್ತು ಭಯೋತ್ಪಾದಕರಿಗೆ ತವರುಮನೆಯಾಗಿ ಕೆಲಸಮಾಡುತ್ತಿವೆ.

ಭಯೋತ್ಪಾದಕರ ಪಟ್ಟಿಯಲ್ಲಿ ನಕ್ಷಲೀಯರೂ, ಮಾವೋವಾದಿಗಳೂ ಸೇರಿಕೊಂಡಿದ್ದಾರೆ. ಮಾವೋವಾದಿಗಳಂತೂ ತಮ್ಮ ಭಯೋತ್ಪಾದಕ ಕಾರ್ಯಬಲದಿಂದ ನೇಪಾಳ ದೇಶವನ್ನೇ ತನ್ನದನ್ನಾಗಿ ಮಾಡಿಕೊಂಡಿದ್ದಾರೆ. ದುರಂತವೇನೆಂದರೆ ಕೊಂಚ ತತ್ವವಿದೆ ಎಂದು ಭಾವಿಸಲಾಗಿರುವ ನಕ್ಸಲೀಯರು ಮತ್ತು ಮಾವೋವಾದಿಗಳು ತಮ್ಮ ಗುಪ್ತ ಕಾರ್ಯಕ್ರಮದ ಈಡೇರಿಕೆಗಾಗಿ ಹಿಂಸೆಯನ್ನು ಅವಲಂಬಿಸಿರುವುದು. ಈ ಕಾರಣದಿಂದಾಗಿ ಯಾವ ತತ್ವ ಅಥವಾ ಸಿದ್ಧಾಂತವನ್ನೇ ಹೊಂದದೆ ಕೇವಲ ಭಯೋತ್ಪಾದನೆಯನ್ನೇ ತಮ್ಮ ಕುಲಕಸುಬನ್ನಾಗಿ ಮಾಡಿಕೊಂಡಿರುವ ಭಯೋತ್ಪಾದಕರೂ, ನಕ್ಸಲೀಯರೂ, ಮಾವೋವಾದಿಗಳೂ ಒಂದೇ ಪ್ರಕಾರದ ರೆಕ್ಕೆಯ ಹಕ್ಕಿಗಳ ಗುಂಪಿಗೆ ಸೇರಿದಂತಾಗಿದೆ.

ನಮ್ಮ ದೇಶದ ಮಟ್ಟಿಗಂತೂ ಭಯೋತ್ಪಾದನೆ ಸಲ್ಲುವುದಿಲ್ಲ; ಭಯೋತ್ಪಾದಕರಿಗೂ ಸ್ಥಾನವಿಲ್ಲ. ಏಕೆಂದರೆ ಭಾರತ ಪ್ರಜಾತಂತ್ರ ವ್ಯವಸ್ಥೆಯನ್ನೂ, ಧರ್ಮ ನಿರಪೇಕ್ಷ ಸರ್ಕಾರವನ್ನೂ ಜನತಾ ಪ್ರತಿನಿಧಿಗಳೇ ರಚಿಸಿರುವ ಸಂವಿಧಾನವನ್ನೂ ಅಂಗೀಕರಿಸಿದೆ. ಆದ್ದರಿಂದ ಯಾರೂ ಎಂಥ ವಿಚಾರವನ್ನೇ ಹೊಂದಿರಲಿ ಅದರ ಪ್ರಚಾರವನ್ನು ಭೂಗತರಾಗಿದ್ದುಕೊಂಡು, ಗೆರಿಲ್ಲಾ ಮಾದರಿ ಯುದ್ಧದ ಮೂಲಕ ಮಾಡಬೇಕಿಲ್ಲ. ಬಹಿರಂಗವಾಗಿಯೇ ಮಾಡಲು ಎಲ್ಲ ಅವಕಾಶಗಳಿವೆ. ಭಾರತ ಧರ್ಮನಿರಪೇಕ್ಷವಾಗಿದೆ ಎಂಬುದಕ್ಕೆ ಭಾರತದ ಉದ್ದಗಲಕ್ಕೂ ಹರಡಿರುವ ಮಸೀದಿಗಳು, ಚರ್ಚುಗಳು, ದೇವಸ್ಥಾನಗಳು, ಗುರುದ್ವಾರಗಳು, ಬಸದಿಗಳು ಸಾಕ್ಷಿಯಾಗಿ ನಿಂತಿವೆ. ಈ ರೀತಿಯ ಚಿತ್ರಣ ನಮಗೆ ಬೇರೆ ಯಾವ ದೇಶಗಳಲ್ಲೂ ದೊರೆಯುವುದಿಲ್ಲ. ದೇಶದ ಆಡಳಿತದಲ್ಲೂ ಎಲ್ಲ ಧರ್ಮಗಳ ಅನುಯಾಯಿಗಳು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಅಲ್ಲದೆ ದೇಶದ ಕಾರ್ಯಾಂಗದ ಉನ್ನತ ಹುದ್ದೆಗಳನ್ನು ಅಲಂಕರಿಸಿ ಆಡಳಿತ ನಡೆಸುತ್ತಿದ್ದಾರೆ. ಒಂದೇ ವಿಶಿಷ್ಟ ಧರ್ಮವನ್ನು ತನ್ನ ರಾಜ್ಯಾಡಳಿತದ ಧರ್ಮವೆಂದು ಘೋಷಿಸಿಕೊಂಡಿರುವ ಕೆಲ ದೇಶಗಳಲ್ಲಿ ಆ ವಿಶಿಷ್ಟ ಧರ್ಮಕ್ಕೆ ಸೇರಿದ ಪ್ರಜೆಗಳಿಗೆ ಆ ದೇಶದಲ್ಲಿರದಷ್ಟು ಸ್ವಾತಂತ್ರ್ಯ ಭಾರತದಲ್ಲಿದೆ.

ಮೇಲೆ ಹೇಳಲಾಗಿರುವ ಸಂಗತಿಗಳು ಭಯೋತ್ಪಾದಕರಿಗೆ ತಿಳಿದಿಲ್ಲವೆಂದೇನಿಲ್ಲ. ಆದರೂ ಕೂಡ ಅವರು ಭಯೋತ್ಪಾದನೆಯ ವೃತ್ತಿಗೆ ಇಳಿದಿರುವುದು ಏಕೆ ಎಂಬುದರ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ನಡೆಯಬೇಕಿದೆ. ಭಯೋತ್ಪಾದನೆಯಲ್ಲಿ ತೊಡಗಿರುವವವರ ಆರ್ಥಿಕ–ಸಾಮಾಜಿಕ–ಶೈಕ್ಷಣಿಕ ಹಿನ್ನೆಲೆಯನ್ನು ತಿಳಿಯಬೇಕಿದೆ. 'ಸಿಮಿ' ಎಂಬ ಹೆಸರಿನ ವಿದ್ಯಾರ್ಥಿ ಸಂಘಟನೆಯೂ ಧರ್ಮಾಧಾರಿತ ಹಿಂಸಾಚಾರದಲ್ಲಿ ತೊಡಗಿದೆ.

ಈಗ ಯಾವ ರೀತಿ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ವಿಶೇಷವಾದ ಅಭಿವೃದ್ಧಿ

ಕಾರ್ಯಗಳನ್ನು ಕೈಗೊಂಡು ನಕ್ಸಲ್ ವಿಚಾರದ ಯುವಕರು ದೇಶದ ಮುಖ್ಯ ವಾಹಿನಿಯೊಂದಿಗೆ ಸೇರುವಂತೆ ಮಾಡಲು ಪ್ರಯತ್ನಿಸುತ್ತಿರುವಂತೆ ಎಲ್ಲ ಧರ್ಮಗಳ ಜನರೂ ಅಭಿವೃದ್ಧಿಯ ಸಮಾನ ಅವಕಾಶ ಪಡೆಯುತ್ತಾ, ಒಂದು ಧರ್ಮದ ಜನರು ಇನ್ನೊಂದು ಧರ್ಮದ ಜನರ ಜೊತೆಗೆ ಸಹಕರಿಸಬೇಕು. ಅಂಥ ಕೆಲಸವನ್ನು ಕರ್ನಾಟಕದ ಬಿಜೆಪಿ ಸರ್ಕಾರ ಮಾಡಿ ತೋರಿಸಿ ಭಾರತಕ್ಕೆ ಮಾದರಿಯಾಗಬೇಕು. ಸ್ವಾತಂತ್ರ್ಯ ನಂತರದ ಅರವತ್ತು ವರ್ಷಗಳ ಅವಧಿಯಲ್ಲಿ ವಿವಿಧ ಧರ್ಮಗಳ ಅನುಯಾಯಿಗಳ ಮನೋಧರ್ಮದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಮದರಸಾಗಳೂ, ವೇದಪಾಠಶಾಲೆಗಳೂ, ಕಾನ್ವೆಂಟುಗಳೂ, ಶಿಕ್ಷಣ ಪದ್ಧತಿಯನ್ನು ಆಮೂಲಾಗ್ರವಾಗಿ ಬದಲಾಯಿಸಿಕೊಳ್ಳುವ ಅಗತ್ಯ ಇದೆ ಎಂದು ಅವುಗಳ ಸಂಚಾಲಕರಿಗೆ ಮನವರಿಕೆಯಾಗುತ್ತಿದೆ. ಅಲ್ಲದೆ ಈಗ ಭಯೋತ್ಪಾದಕತೆಯನ್ನು ಒಂದು ವಿಶಿಷ್ಟ ಧರ್ಮದೊಂದಿಗೆ ತಳಕು ಹಾಕುತ್ತಿರುವುದು ಸರಿಯಲ್ಲವೆಂದೂ, ಆ ವಿಶಿಷ್ಟ ಧರ್ಮದಲ್ಲಿಯೇ ಭಯೋತ್ಪಾದಕತೆಯನ್ನು ತಮ್ಮೆಲ್ಲ ಶಕ್ತಿಯಿಂದ ಖಂಡಿಸಬೇಕೆಂಬ ಮನೋಭಾವ ಮೂಡುತ್ತಿರುವುದನ್ನು ಗಮನಿಸಬೇಕಾದುದು ಅಗತ್ಯವಾಗಿದೆ. ಎಲ್ಲೆಲ್ಲಿ ರಾಷ್ಟ್ರೀಯವಾದದ ಜಾಗೃತಿ ಉಂಟಾಗುತ್ತಿದೆಯೋ ಅಲ್ಲಲ್ಲಿ ಅದನ್ನು ಬಲಪಡಿಸುವ ಕಾರ್ಯವೂ ಆಗಬೇಕಿದೆ. ಹಿಂದುತ್ವದ ಮಾತನ್ನು ಹೇಳುವ ಬಿಜೆಪಿ ಮೊಟ್ಟಮೊದಲು ಹಿಂದೂ ಧರ್ಮದಲ್ಲಿರುವ ಅನೇಕ ಪ್ರಕಾರದ ಸಾಮಾಜಿಕ ದೋಷಗಳನ್ನು ತೊಡೆದು ಹಾಕುವ ಪ್ರಯತ್ನ ಮಾಡಬೇಕು. ಧರ್ಮಗಳ ಆಧಾರದ ಮೇಲೆ ಏಳಿಗೆಯ ಸಿದ್ಧಾಂತವನ್ನು ನಿರ್ಧರಿಸುವುದಕ್ಕಿಂತ ಮಿಗಿಲಾಗಿ ಅಂತ್ಯೋದಯದ ಸಿದ್ಧಾಂತವನ್ನು ಆಧಾರವಾಗಿಟ್ಟುಕೊಂಡು ನಿರ್ಧರಿಸುವುದು ಸಾಮಾಜಿಕವಾಗಿ ನ್ಯಾಯೋಚಿತವಾಗಿರುತ್ತದೆ. ಬಿಜೆಪಿ ಅಧಿಕಾರಕ್ಕೆ ಬಂದೊಡನೆ ಹಿಂದುತ್ವವಾದವನ್ನು ಒಪ್ಪದವರನ್ನು ಕಗ್ಗೊಲೆ ಮಾಡಲಾಗುತ್ತದೆ, ಅವರ ಪ್ರಾರ್ಥನಾ ಮಂದಿರಗಳನ್ನು ನೆಲಸಮಗೊಳಿಸಲಾಗುತ್ತದೆ, ಅವರನ್ನು ಉಚ್ಚಾಟಿಸಲಾಗುತ್ತದೆಂಬಂಥ ಭಯಂಕರವಾದ ಮಾತುಗಳು ಕೇಳಿಬರುವಂಥಾ ಸಮಯದಲ್ಲಿ ಆ ಮಾತುಗಳು ಅರ್ಥಹೀನ, ಆ ಮಾತುಗಳ ಹಿಂದೆ ಯಾವ ರಾಜಕೀಯ ಶಕ್ತಿಯೂ ಇಲ್ಲ ಎಂಬುದನ್ನು ಯಡಿಯೂರಪ್ಪ ಸಿದ್ಧಗೊಳಿಸಬೇಕು. ಇದುವರೆಗೆ ಆಡಳಿತ ನಡೆಸಿದ ಎಲ್ಲ ಪಕ್ಷಗಳ ಆಡಳಿತದಿಂದ ಬೇಸತ್ತ ಮತದಾರರು ಒಂದು ಸಲವಾದರೂ ಬೇರೊಂದು ಪಕ್ಷಕ್ಕೆ ಅಧಿಕಾರ ಕೊಟ್ಟು ನೋಡೋಣ ಎಂಬ ಅಭಿಪ್ರಾಯದವರಾಗಿದ್ದಾರೆ ಮತದಾರರು. ಅದರ ಫಲವಾಗಿ ಬಿಜೆಪಿ ಕರ್ನಾಟಕದಲ್ಲಿ ಸರ್ಕಾರ ರಚಿಸಿದೆ. ನಿಜವಾಗಿ ಮತದಾರ ಯಾವ ಪಕ್ಷದ ಪರವೂ ಇಲ್ಲ; ಅವನಿರುವುದು ಸಂವಿಧಾನ ಆಶೋತ್ತರಗಳ ಪರ. ಈ ವಿಷಯವನ್ನು ರಾಜ್ಯದ ಹಾಗೂ ರಾಷ್ಟ್ರದ ಬಿಜೆಪಿಯ ನಾಯಕರು ಎಷ್ಟು ಬೇಗ ಮನಗೊಳ್ಳುತ್ತಾರೋ ಅಷ್ಟು ಬೇಗ ರಾಷ್ಟ್ರಕ್ಕೆ ಕ್ಷೇಮ.

* * *

ಸಂಗೀತ ಕಲಾವಿದರು – ೧೦

ಸಂಗೀತಗಾರ ಪಿಳ್ಳೈ ಸಿ.ಕೆ.ರಾಮಚಂದ್ರನ್

ಸಿ.ಕೆ. ರಾಮಚಂದ್ರನ್‌ರವರ ಪ್ರಾಥಮಿಕ ಶಿಕ್ಷಣ ಸಂಗೀತ ವಿದ್ವಾನ್ ಗಾನ ಭೂಷಣಂ ದಿ॥ ಕುವಾರ ಕೋಂ ಅವರಲ್ಲಿ ಆಯಿತು. ತಿರುವನಂತಪುರದಲ್ಲಿರುವ ಸ್ವಾತಿ ತಿರುನಾಳ್ ಕಾಲೇಜಿನಿಂದ ಪದವಿಧರರಾದ ಮೇಲೆ ದಿ॥ ಡಾ॥ ಶಮ್ಮಂಗುಡಿ ಆರ್. ಶ್ರೀನಿವಾಸ್ ಅಯ್ಯರ್‌ರವರಿಂದ ಕರ್ನಾಟಕ ಸಂಗೀತದ ಶಿಕ್ಷಣವನ್ನು ಪಡೆದರು. ಇವರು ಇಡೀ ದೇಶವನ್ನಷ್ಟೇ ಅಲ್ಲ ವಿದೇಶದಲ್ಲಿಯೂ ಸಂಗೀತದ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ಇವರಿಗೆ ಅನೇಕ ಸನ್ಮಾನಗಳು ಮತ್ತು ಬಿರುದುಗಳು ಲಭ್ಯವಾಗಿವೆ. ಇವುಗಳಲ್ಲಿ ಕೇರಳ ಸಂಗೀತ ನಾಟಕ ಅಕಾಡೆಮಿಯ ಪುರಸ್ಕಾರವೂ ಸೇರಿದೆ.

* * * * * * * * * *

ಸಂಗೀತ ಕಲಾವಿದರು – ೧೧

ಗಾಯಕ ಡಾ॥ ಕೆ. ವಾಗೀಶ್

ಪ್ರಖ್ಯಾತ ಟೈಗರ್ ವರದಾಚಾರ್ಯರ ಸಂಗೀತ ಶಾಲೆಯ ಡಾ.ವಾಗೀಶ್‌ರವರು ಕರ್ನಾಟಕ ಸಂಗೀತದಲ್ಲಿ ತಮ್ಮ ಚಿಕ್ಕಮ್ಮ ಸಂಗೀತ ವಿದೂಷಿ ಮೈಸೂರಿನ ಹೆಚ್. ಎಸ್. ಮಹಾಲಕ್ಷ್ಮಿಯವರ ಮಾರ್ಗದರ್ಶನದಲ್ಲಿ ಪಾರಂಪರಿಕವಾಗಿ ಮತ್ತು ಕ್ರಮಬದ್ಧವಾಗಿ ಶಿಕ್ಷಣ ಪಡೆದರು. ಮುತ್ತುಸ್ವಾಮಿ ದೀಕ್ಷಿತರ ರಚನೆಗಳ ಬಗ್ಗೆ ನಡೆಸಿದ ಸಂಶೋಧನೆಗಾಗಿ ಅವರು ದೆಹಲಿ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿಯನ್ನು ಪಡೆದರು. ಡಾ ವಾಗೀಶ್‌ರವರ ಕಛೇರಿಯು ಸಮೃದ್ಧ ಕಲ್ಪನಾಶೀಲತೆ ಹಾಗೂ ಆತ್ಮ ಸಂತೋಷವನ್ನು ನೀಡುವ ರೀತಿಯಲ್ಲಿ ತುಂಬಾ ದಕ್ಷತೆಯುಳ್ಳ ಹಾಡುಗಾರಿಕೆಯ ತಂತ್ರಗಳಿಂದ ಕೂಡಿರುತ್ತದೆ. ಡಾ. ವಾಗೀಶ್‌ರವರು ಅನೇಕ ಬಹುಮಾನಗಳಿಂದ ಮತ್ತು ಗೌರವಗಳಿಂದ ಸನ್ಮಾನಿತರಾಗಿದ್ದಾರೆ. ಅವರು ಸ್ವತಃ ಉಚ್ಚಶ್ರೇಣಿಯ ರಚನಾಕಾರರೂ ಆಗಿದ್ದಾರೆ. ಈಗ ಅವರು ಆಕಾಶವಾಣಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

* * *

ಶ್ರೀರಂಗರ ಸಾಮಾಜಿಕ ನಿಷ್ಠೆ

- ಶ್ರೀನಿವಾಸ ಹಾವನೂರ

ಶ್ರೀರಂಗರ ಸಾರ್ವಜನಿಕ ರಂಗದಲ್ಲಿ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಸಾಧನೆಯನ್ನು ಕುರಿತು ನಾನು ವಿವರಿಸಲಿಕ್ಕಿದೆ. ಇದರ ತಾತ್ವಿಕ ಹಿನ್ನೆಲೆಯೇನು? ಪ್ರೇರಣೆಗಳಾವುವು? ಸಮಾಜವನ್ನು ಅವರು ಯಾವ ಅರ್ಥದಲ್ಲಿ ಸ್ವಿಕರಿಸಿದ್ದರು- ಎಂಬುದನ್ನು ಮೊದಲಿಗೆ ತಿಳಿದಿರಬೇಕು.

ಒಂದು ಮಾತು ಮಾತ್ರ ನಿಜ. ಸಾಮಾಜಿಕ ಚಿಂತನೆ ಅವರ ಎಲ್ಲಾ ಬರವಣಿಗೆಯಲ್ಲಿ, ಕಾರ್ಯದಲ್ಲಿ ಸದೈವ ಜಾಗೃತವಾಗಿದ್ದಿತು. ಅವರ ಮುಖ್ಯ ಕ್ಷೇತ್ರ ನಾಟಕ ರಂಗವೇ. ಎಲ್ಲ ನಾಟಕಗಳಲ್ಲಿ ಒಂದಿಲ್ಲೊಂದು ಸಾಮಾಜಿಕ ಸಮಸ್ಯೆಯನ್ನು, ಕೆಲವೆಡೆ ರಾಜಕೀಯ ವಿಡಂಬನೆಯನ್ನು ತಂದೇ ಇದ್ದಾರೆ. ನಾಟಕಗಳಿಗೆ ಅವರು ಕೊಟ್ಟ ಶೀರ್ಷಿಕೆಗಳು 'ಉದರ ವೈರಾಗ್ಯ,' 'ಪ್ರಪಂಚ ಪಾನಿಪತ್ತು,' 'ಶೋಕಚಕ್ರ'. ಈ ಮೊದಲಾದವುಗಳೇ ಸಧ್ಯಕಾಲದ ಸ್ಥಿತಿಗತಿಗೆ ನಿದರ್ಶನವಾಗಿವೆ. ನಮ್ಮಲ್ಲಿ ಪೌರಾಣಿಕ, ಐತಿಹಾಸಿಕ ಘಟನೆಗಳು, ವೈವಿಧ್ಯಮಯ ಪಾತ್ರಗಳು ಬೇಕೆಂದರೆ ನಾನಾ ರೀತಿಯಲ್ಲಿ ವಸ್ತುವಾಗಬಲ್ಲವು. ಶ್ರೀರಂಗರು ಮನಸ್ಸು ಮಾಡಿದ್ದರೆ ಅವನ್ನೆತ್ತಿಕೊಂಡು ನಾಟಕ ರಚಿಸಬಹುದಾಗಿತ್ತು. 'ಪರಮೇಶ್ವರ ಪುಲಕೇಶಿ' ಒಂದನ್ನು ಬಿಟ್ಟರೆ ಬೇರಾವ ಐತಿಹಾಸಿಕ ನಾಟಕ ರಚಿಸಲಿಲ್ಲ. ಹಾಗೆ ನೋಡಿದರೆ, ವಿಜಯನಗರ ಸಾಮ್ರಾಜ್ಯದ ಷಟ್ ಸಾಂವತ್ಸರಿಕ ಉತ್ಸವದ ನಿಮಿತ್ತವಾಗಿ (೧೯೩೬) ಮೂರು ನಾಟಕಗಳ ಹೊಳಹನ್ನು ಹಾಕಿಕೊಂಡಿದ್ದರಂತೆ; ಬರೆಯಲಿಲ್ಲ. ಕೆಲವು ನಾಟಕಗಳಲ್ಲಿ ಪೌರಾಣಿಕ ಪಾತ್ರಗಳ ಹೆಸರುಗಳೇನೊ ಬರುತ್ತವೆ-ಆದರೆ ಸಾಮಾಜಿಕ ವೇಷದಲ್ಲಿ. (ಧರ್ಮರಾಯ=ಧರ್ಮಪ್ಪ). ತಾತ್ಪರ್ಯ-ಶ್ರೀರಂಗರಲ್ಲಿ ಸಾಮಾಜಿಕ ಕಳಕಳಿ ಸದೈವ ಜಾಗೃತವಾಗಿದ್ದಿತು.

ಅವರ 'ಗೀತಾಗಾಂಭೀರ್ಯ'ವನ್ನೇ ತೆಗೆದುಕೊಳ್ಳಿರಿ. ಅದು ಎಷ್ಟೆಂದರೂ ಅಧ್ಯಾತ್ಮ ಗ್ರಂಥ. ಅನೇಕರು ಭಕ್ತಿಯಿಂದ ಪಾರಾಯಣ ಮಾಡುವಂಥ ಗ್ರಂಥ. ಅದರ ಮೇಲೆ ನೂರಾರು ಟೀಕಾಗ್ರಂಥಗಳು ಹೊರಟಿವೆ-ಸಂಸ್ಕೃತ, ಕನ್ನಡ, ವಿದೇಶೀ ಭಾಷೆಗಳಲ್ಲಿ ಸಹ. ಆಧುನಿಕರಾದ ಲೋಕಮಾನ್ಯ ತಿಲಕರು, ಡಿ.ವಿ.ಜಿ.ಯವರಂತೂ ಬೃಹತ್ ರೂಪದ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಶ್ರೀರಂಗರ 'ಗೀತಾಗಾಂಭೀರ್ಯ' ಬೇರೆಯೇ ದಾರಿಯನ್ನು ಹಿಡಿಯಿತು. ಅವರು ಗೀತೆಯನ್ನು ಕಂಡದ್ದು ಸಾಮಾಜಿಕ ಸಮಸ್ಯೆಯ ದೃಷ್ಟಿಯಿಂದ. ಆ ಸಮಸ್ಯೆ ಅರ್ಜುನನಿಗೆ ಒದಗಿ ಬಂದದ್ದು. ತನ್ನ ಕುಲದ, ಅದರ ಸುತ್ತಲಿನ ಸಮಾಜದ ವಿನಾಶಕ್ಕೆ ಈ ಯುದ್ಧ ಕಾರಣವಾಗುತ್ತದಲ್ಲ- ಎಂಬ ಯೋಚನೆ ಅವನದು. ಸಮಾಜವನ್ನು ತನ್ನ ಸ್ವಾರ್ಥಕ್ಕಾಗಿ ಬಲಿ ಕೊಡಬೇಕೆ? ನನಗಾಗಿ ಸಮಾಜವೆ? ಇಲ್ಲ, ಸಮಾಜಕ್ಕಾಗಿ ನಾನಿರಬೇಕೆ? ಎಂಬ ಮೂಲಭೂತ ಸಮಸ್ಯೆ ಅವನದಾಗಿತ್ತು. ಮುಂದುವರಿದು ಶ್ರಿರಂಗರು ಸಮಾಜದ ಸ್ವಾಸ್ಥ್ಯಕ್ಕಾಗಿ ವ್ಯಕ್ತಿಯು ತನ್ನ ಸ್ವಾತಂತ್ರ್ಯವನ್ನು ಬಲಿಕೊಡಬೇಕೆ? ಈ ಸಮಸ್ಯೆಗೆ ಉತ್ತರವು ಭಗವದ್ಗೀತೆಯಲ್ಲಿ ಸಿಗುವುದಿಲ್ಲ- ಎನ್ನತ್ತಾರೆ ಶ್ರೀರಂಗರು. 'ತತೋ ಯುದ್ಧಾಯ ಯುಜ್ಯಸ್ವ' ಎಂದು ಭಗವಂತ ಹೇಳುವಲ್ಲಿ ಅರ್ಜುನನ ಸಾಮಾಜಿಕ ಸ್ವರೂಪದ ಸಮಸ್ಯೆಗೆ ಉತ್ತರವನ್ನು ಕಾಣಲಾರೆವು. ಶ್ರೀರಂಗರು ಹೀಗೆ ಅದನ್ನು ಮಂಡಿಸಿದ್ದಾರೆ: "ವ್ಯಕ್ತಿ ಮತ್ತು ಸಮಾಜ ಇವುಗಳ ನಡುವೆ ಆತ್ಯಂತಿಕ ಸಂಬಂಧವಿದ್ದರೂ ಅವು ಒಂದನ್ನೊಂದು

ಅವಲಂಬಿಸಿಲ್ಲ. ಒಂದು ಹೆಚ್ಚು, ಇನ್ನೊಂದು ಕಡಿಮೆ ಎನ್ನುವಂತೆಯೂ ಇಲ್ಲ. ಆದರೆ ಸಮಾಜ ಜೀವನದ ತಳಹದಿಯು ವ್ಯಕ್ತಿಯ ಸ್ವಾತಂತ್ರ್ಯದ ಆಹುತಿಯ ಮೇಲೆ ನಿಲ್ಲಬೇಕೆ? ವ್ಯಕ್ತಿಯು ಸಮಾಜ ಜೀವನದ ಅಂಗ ಎನ್ನುವುದಕ್ಕಿಂತ ಪ್ರತಿಯೊಬ್ಬನೂ ಸಮಾಜವೇ." ಅಂತೂ ವೈಯಕ್ತಿಕ ಸ್ವಾತಂತ್ರ್ಯ ಹಾಗೂ ವ್ಯಕ್ತಿಗಾಗಿ ಸಮಾಜ ಎಂಬೀ ನಿಲುವಿನ ಅನುಕೂಲತೆ, ಪ್ರತಿಕೂಲತೆಗಳನ್ನು ವಿವೇಚಿಸಿದ್ದಾರೆ. ಗೀತಾಗಾಂಭೀರ್ಯದ 'ಸುಖ ಮತ್ತು ಸಮಾಜ' ಎಂಬ ಪ್ರಕರಣದಲ್ಲಿ ಇದೇ ಅಂಶವನ್ನು ಚರ್ಚಿಸಿದ್ದಾರೆ. ಮತ್ತೆ ನಾನು ಹೇಳಬೇಕು; ಶ್ರೀರಂಗರಲ್ಲಿ ಸಾಮಾಜಿಕ ಕಳಕಳಿಯು ಬೇರಾವುದಕ್ಕು ಅವಕಾಶ ಕೊಡದಷ್ಟು ತೀವ್ರವಾಗಿದ್ದಿತು.

ಈ ತೀವ್ರತೆಗೆ ಪ್ರಚೋದನೆ ಎಂದರೆ, ಅವರು ಕಂಡಿದ್ದ ಸಮಾಜದಲ್ಲಿಯ ಪರಸ್ಪರ ವಿರೋಧೀ ಪ್ರವೃತ್ತಿಗಳು. ಹೆಜ್ಜೆ ಹೆಜ್ಜೆಗೂ ಪ್ರತಿಫಟ್ಟದಲ್ಲಿಯೂ ಅವು ಗಮನಕ್ಕೆ ಬರುತ್ತವೆ. ನಮ್ಮ ಶಾಸ್ತ್ರಗಳು ಒಂದು ಹೇಳ್ತವೆ; ವ್ಯವಹಾರ ಬೇರೇನೇ ಇರ್ತದೆ ಅನ್ನುವುದನ್ನು ಶ್ರೀರಂಗರು ಬೇರೆ ಬೇರೆ ಸಂದರ್ಭಗಳಲ್ಲಿ ಎತ್ತಿ ತೋರಿಸಿದ್ದಾರೆ. ಮನೆತನದ ಅಭಿವೃದ್ಧಿಗೆ ಗಂಡಸು ಮಗನೇ ಮುಖ್ಯ. ಆದರೆ ಗಂಡಸು ಮಗ, ಅಪ್ಪ ಸತ್ತಮೇಲೆ ನೀರು ಬಿಡಲಿಕ್ಕೆ, ಸ್ವರ್ಗ ಕಾಣಿಸಲಿಕ್ಕೆ ಅಂತ ಧರ್ಮಶಾಸ್ತ್ರ ಹೇಳ್ತದೆ. ನಿಜ ಸಂಗತಿ ಎಂದರೆ ಗಂಡಸು ಮಗ ದುಡಿದುಗಳಿಸ್ತಾನೆ- ಅದಕ್ಕೆ ಬೇಕು ಅಂತ ವ್ಯವಹಾರ ಧರ್ಮ ಹೇಳ್ತದೆ.

ಇನ್ನೊಂದು ವೈರುಧ್ಯ ಅಂದರೆ ಸಂಪ್ರದಾಯಕ್ಕೆ ಕಣ್ಣುಮುಚ್ಚಿ ಅಥವಾ ತಿಳಿದೂ ತಿಳಿದೂ ಅಂಟಿಕೊಳ್ಳುವ ಸ್ವಭಾವ. ಓರ್ವ ಡಾಕ್ಟರರ ಉದಾಹರಣೆ ಕೊಡ್ತಾರೆ-ಶ್ರೀರಂಗರು. ಡಾಕ್ಟರರಾಗಿ ಅವರಿಗೆ ಚೆನ್ನಾಗಿ ಗೊತ್ತು-ಕನ್ಯೆಗೆ ೧೭-೧೮ ವರ್ಷ ತುಂಬಿತೆಂದರೆ ಮದುವೆಯಾಗುವ ವಯಸ್ಸು ಎಂದು. ಆದರೂ ಅವರು ತಮ್ಮ ಹತ್ತು ವಯಸ್ಸಿನ ಮಗಳಿಗೆ ವರ ಹುಡುಕುತ್ತಿದ್ದರಂತೆ. ಆಗಿನ ಕಾಲದ ಬಾಲ್ಯವಿವಾಹದ ಸಂಪ್ರದಾಯ ಡಾಕ್ಟರರನ್ನೂ ಕಟ್ಟಿಹಾಕಿದ್ದಿತು.

ಈ ಕಾರಣದಿಂದ ಇಡೀ ಸಮಾಜವೇ ಹಿನ್ನೆಡೆಯಲ್ಲಿದೆ ಎಂದು ಅವರ ಪ್ರಗತಿಪರ ದೃಷ್ಟಿಗೆ ಅನಿಸತೊಡಗಿತು. "ಸಮಾಜದಲ್ಲಿ ಸೊಕ್ಕು-ಠಕ್ಕು ಬೆಳೆದಿವೆ. ಶಿಸ್ತು ಸಡಿಲಿದೆ. ಅಜ್ಞಾನ, ಅಂಧಶ್ರದ್ಧೆ, ಎಲ್ಲೆಂದರಲ್ಲಿ ಕಾಣಿಸ್ತದೆ. ಧೈರ್ಯ, ಸಾಹಸ, ಪರಸ್ಪರ ವಿಶ್ವಾಸ ಪ್ರಾಮಾಣಿಕತೆ ಕುಗ್ಗುತ್ತಲಿದೆ" ಎಂದು ಅವರು ಪ್ರಾಮಾಣಿಕವಾಗಿ ನಂಬಿದ್ದರು. ಈ ಬಗೆಯ ನೈತಿಕ ಅವನತಿಯನ್ನು ಕಂಡು, ಗಾಂಧೀಜಿಯವರಿಗೆ ಅವರು 'ಜನರನ್ನು ಮೊದಲು ಸುಧಾರಿಸಬೇಕು, ಮೇಲೆತ್ತಬೇಕು' ಎಂದು ಹೇಳಿದ್ದರು. ಯಾವಾಗ? ತರುಣ ವಯಸ್ಸಿನಲ್ಲಿಯೇ. 'ಗಾಂಧೀಜಿ' ಎಂದರೆ ಅತ್ಯಂತ ಭಯ ಭಕ್ತಿಯಿಂದ ಎಂಥೆಂಥ ನಾಯಕರು ನಡೆದುಕೊಳ್ಳುತ್ತಿದ್ದ ಕಾಲದಲ್ಲಿ! ಇಷ್ಟೊಂದು ಧೈರ್ಯ ಬರಲಿಕ್ಕೆ ಅವರಲ್ಲಿ ಸದಾ ಪುಟಿಯುತ್ತಲಿದ್ದ ಸಾಮಾಜಿಕ ಕಳಕಳಿಯೇ.

ಶ್ರೀರಂಗರು ಕಂಡ ಇನ್ನೊಂದು ವೈರುಧ್ಯ-ಬಡತನ ಮತ್ತು ಅದರ ದುಷ್ಪರಿಣಾಮ. ಸಮಾಜದಲ್ಲಿ ಸ್ವಾಸ್ಥ್ಯ ಇರಬೇಕಾದರೆ ಸುಸ್ಥಿತಿ ಇರಬೇಕು. ೧೯೨೮ ರಲ್ಲಿ ವಿದೇಶದಿಂದ ಹಿಂತಿರುಗಿದಾಗ 'ಭಾರತದ ಬಡತನದ ಸ್ಥಿತಿ ನೋಡಿ ಹೊಟ್ಟೆ ಉರಿಯಿತು" ಎಂದು ತಮ್ಮ 'ಆತ್ಮಜಿಜ್ಞಾಸೆ' ಗ್ರಂಥದಲ್ಲಿ ಕಾಣಿಸಿದ್ದಾರೆ.

ಇದನ್ನು, ಶ್ರೀಮಂತರಿಂದ ಬಡವರ ಶೋಷಣೆ ಎಂಬ ಅರ್ಥದಲ್ಲಿ ಈಗಿನವರು ಹೇಳುವ ರೀತಿಯಲ್ಲಿ, ಅರ್ಥೈಸಬಾರದು. ತಲೆತಲಾಂತರದಿಂದ ನಮ್ಮ ದೇಶವನ್ನು ಹಿಂಡುತ್ತಿದ್ದ ದಾರಿದ್ರ್ಯ ಅವರ ಗಮನದಲ್ಲಿದ್ದಿತು. ಸಾಮಾಜಿಕ ಕಳಕಳಿಯ ಮೂಲ

ಕಾರಣ ಅವರಲ್ಲಿದ್ದ ಪ್ರಾಮಾಣಿಕತೆಯ ಪರಾಕಾಷ್ಠೆ. Honesty to the core.

ಜೊತೆಗೆ ಹರಿಜನರ ಉದ್ಧಾರ, ಸರಳ ಜೀವನ, ಸ್ವಾವಲಂಬನ – ಇವೂ ಗಾಂಧೀಯುಗದ ಸಾಮಾಜಿಕ ಕ್ರಾಂತಿಯ ಫಲವಾಗಿ ಶ್ರೀರಂಗರಲ್ಲಿ ಮೈದಳೆದುವು. ಇತರ ಕನ್ನಡ ಸಾಹಿತಿಗಳ ಮೇಲೂ ಈ ಅಂಶಗಳು ಆಗಿನ ಕಾಲದಲ್ಲಿ ಪರಿಣಾಮ ಮಾಡಿದ್ದವು. ಉದಾ. ಹರಿಜನ ಸಮಸ್ಯೆ: ಕಾರಂತರ 'ಚೋಮನದುಡಿ,' ಕುವೆಂಪು ಅವರ 'ಶೂದ್ರ ತಪಸ್ವಿ,' ಮಾಸ್ತಿಯವರ 'ಕಾಕನಕೋಟೆ,' ಅನಕೃ ಅವರ'ಪಶ್ಚಾತ್ತಾಪ,'– ಇವು ೧೯೩೦ರ ದಶಕದ ಒಳ–ಹೊರಗೆ, ಐದಾರು ವರ್ಷಗಳ ಅವಧಿಯಲ್ಲಿ ಹೊರಬಂದವು. ಇದಕ್ಕೆ ಶ್ರೀರಂಗರ 'ಹರಿಜನ್ವಾರ' ನಾಟಕವೂ ಸೇರಿದೆ. ಗಾಂಧೀಯುಗದ ಈ ಪ್ರಭಾವದಿಂದ 'ನಾನು ಸಮಾಜಕ್ಕಾಗಿ, ದೇಶಕ್ಕಾಗಿ ಕೆಲಸ ಮಾಡಬೇಕು' ಎನ್ನುವ ಗಟ್ಟಿಮುಟ್ಟಾದ ನಿಷ್ಠೆ ಅವರಲ್ಲಿ ನೆಲೆಗೊಂಡಿದ್ದಿತು. ಇದೇ ಮಾತನ್ನು ಒಮ್ಮೆ ಅವರು ಪಂಡಿತ ತಾರಾನಾಥರೆದುರು ವ್ಯಕ್ತಪಡಿಸಿದ್ದರು:I want to live not for myself but for others. ಇದೇನೂ ಭಾವನಾವಶತೆಯಿಂದ ಹೇಳದ ಮಾತಾಗಿರಲಿಲ್ಲ. ಅದೊಂದು ಒಳಕುದಿಯ ರೀತಿಯಲ್ಲಿ ವಾಸ್ತವತೆಯ ಗಟ್ಟಿ ನೆಲೆಯಲ್ಲಿ ಮೂಡಿಬಂದದ್ದಾಗಿತ್ತು. ಬೇರೊಂದು ಪ್ರಸಂಗದಲ್ಲಿ ಅವರು 'ನಾನೊಬ್ಬ tough egg' ಎಂದು ಹೇಳಿದ್ದು ನೆನಪಿಗೆ ಬರುತ್ತದೆ.

ಈ ಸಾಮಾಜಿಕ ಕಳಕಳಿಗೆ ಅಂತರಂಗಂಗೆಯಾಗಿ ಇದ್ದ ಇನ್ನೊಂದು ಅಂಶವೆಂದರೆ ಕನ್ನಡತನ. ಇವತ್ತು 'ಕನ್ನಡಾಭಿಮಾನಿಗಳು,' 'ಕನ್ನಡಕ್ಕಾಗಿ ದುಡಿದವರು,' 'ಕನ್ನಡಮ್ಮನ ಸೇವೆ ಮಾಡುವವರು' ಮುಂತಾದ ಬಣ್ಣನೆಯ ಮಾತುಗಳನ್ನು ಅವರಿವರಿಗೆ ಅಂಟಿಸುತ್ತೇವೆ.

ಶ್ರೀರಂಗರಲ್ಲಿದ್ದದ್ದು ರಕ್ತಗತವಾದ ಕನ್ನಡತನ. ಸಹಜಾಸಹಜವಾಗಿ ಕಾಣಿಸಿಕೊಂಡಂಥಾದ್ದು. ಹೈಸ್ಕೂಲ್, ಕಾಲೇಜಿನಲ್ಲಿದ್ದಾಗ, ನಿರುದ್ಯೋಗದ ಕಾಲದಲ್ಲಿ ಸಹ ಕನ್ನಡದ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಸಿಕೊಂಡಿರತಿದ್ರು. ಶಾಲಾ ವಿದ್ಯಾರ್ಥಿಯಿದ್ದಾಗ ಕರ್ನಾಟಕ ಬಾಲಮಿತ್ರ ಸಂಘ, ಶ್ರೀ ವಿದ್ಯಾರಣ್ಯ ಪುಕ್ಕಟೆ ವಾಚನಾಲಯ ನಡಸ್ತಾ ಇದ್ದರು. ಜಮನಾಲಾಲ್ ಬಜಾಜ್, ಸಿ. ರಾಜಗೋಪಾಲಾಚಾರಿ ಅಂಥವರು ವಿಜಾಪುರಕ್ಕೆ ಬಂದಿದ್ದಾಗ, ಈ ಸಂಸ್ಥೆಗಳಿಗೆ ಭೆಟ್ಟಿ ಕೊಡುವಷ್ಟು ಹೆಸರು ಮಾಡಿದ್ದವು. ಪುಣೆಯ ಕಾಲೇಜಿನಲ್ಲಿದ್ದಾಗ, ಅಲ್ಲಿಯ ಕಾಲೇಜ್ ಮ್ಯಾಗಜಿನ್‌ನಲ್ಲಿ ಕನ್ನಡಕ್ಕಾಗಿ ಎಂಟು ಪುಟಗಳನ್ನು ಮೀಸಲಿರಿಸಲಾಗಿದ್ದಿತು. ಅದನ್ನು ತುಂಬಿಸುವ ಕೆಲಸ ಶ್ರೀರಂಗ ಉರ್ಫ್ ಜಾಗೀರದಾರರದು. ಎಂದರೆ ಅನಿವಾರ್ಯವೆಂಬಂತೆ ಅದಕ್ಕೆ ಲೇಖನ ಬರೆಯುವ ಕೆಲಸ. ಅಂದ ಹಾಗೆ ಬಿ.ಎ.ಗೆ. ಕನ್ನಡ ತಗೊಂಡಿದ್ರು. ಎರಡು ಪೇಪರಗಳ ಅಭ್ಯಾಸ. ಅವೂ ಹಳಗನ್ನಡದ ಪಠ್ಯಗಳು! ಅದೇನೂ ಕನ್ನಡ ಪ್ರೇಮದಿಂದಲ್ಲ. ಅವನ್ನು ಕಲಿಸಲು ಪುಣೆಯಲ್ಲಿ ಕನ್ನಡ ಅಧ್ಯಾಪಕರೇ ಇರಲಿಲ್ಲ. ಅದರರ್ಥ ಕನ್ನಡದ ಅಭ್ಯಾಸಕ್ಕಾಗಿ ನಿಗದಿತವಾದ 'ಪಿರಿಯಡ್' ತಪ್ಪಿಸುವುದು ಸಾಧ್ಯ ತಾನೇ.

ಇತ್ತ ತಮ್ಮ ನಿರುದ್ಯೋಗ ಪರ್ವದಲ್ಲಿ,ನಾಟಕ ಬರೆದರಷ್ಟೇ. ಅದೇನೂ ಕನ್ನಡದ ಮೇಲಿನ 'ಪ್ರೇಮ'ದಿಂದಲ್ಲ. 'ಕನ್ನಡ' ಅನ್ನುವ ಪರಿಕಲ್ಪನೆ ಅವರಲ್ಲಿ ಮೂಡಿದುದು, ೧೯೩೦ ರಷ್ಟು ತಡವಾಗಿ. ಭಾಷಾಶಾಸ್ತ್ರದ ಅಭ್ಯಾಸ ಮಾಡುತ್ತಿದ್ದಾಗ ಮತ್ತು ಆಲೂರ ವೆಂಕಟರಾಯರ ಸಂಪರ್ಕ ಬಂದಾಗ ಆ ಭಾವನೆ ಮೈದೋರಿತು. ಕನ್ನಡ ಸಾಹಿತ್ಯ, ಕನ್ನಡಿಗರು, ಕರ್ನಾಟಕ–ಎಂಬೀ ಅಂಶಗಳು ಅವರು ಕರ್ನಾಟಕ ಕಾಲೇಜಿಗೆ ಪ್ರೊಫೆಸರರಾಗಿ ಬಂದಾಗ ಹೊಮ್ಮಿದುವು. "ಧಾರವಾಡದ ವಾತಾವರಣ ಎನ್ನಿರಿ. ನನ್ನ ಪ್ರಾಚೀನ ಕರ್ಮ

ಎನ್ನಿರಿ, ಕನ್ನಡಕ್ಕೂ ನನಗೂ ನೆಂಟಸ್ತಿಕೆಯಾಯಿತು" ಎಂದು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿದ್ದಾರೆ.

ಸಾರಾಂಶ : ಸಮಾಜದ ಏಳಿಗೆಯಾಗಬೇಕು; ನಮ್ಮ ನಡತೆ ಪ್ರಾಮಾಣಿಕವಾಗಿರಬೇಕು, ಜನತೆಗಾಗಿ ಕನ್ನಡಕ್ಕಾಗಿ ತಾನು ಸಾರ್ವಜನಿಕ ಕೆಲಸ ಮಾಡಬೇಕು. ಇದೇ ಅವರಲ್ಲಿದ್ದ ಸಾಮಾಜಿಕ ನಿಷ್ಠೆಯ ಒಳತಿರುಳು.

ಈ ಹಿನ್ನೆಲೆಯಲ್ಲಿ ಅವರು ಕೈಕೊಂಡ ಸಾಮಾಜಿಕ ಕಾರ್ಯಗಳನ್ನು ಬರಿಯ ಉಲ್ಲೇಖಿಸುತ್ತೇನೆ :

ಒಂದು, ಅವರು ಕರ್ನಾಟಕ ಕಾಲೇಜಿನಲ್ಲಿದ್ದಾಗ ನಾಟ್ಯವಿಲಾಸಿ ಸಂಘವನ್ನು ಸ್ಥಾಪಿಸಿದರಷ್ಟೇ. ಆದರೆ ಅದನ್ನು ಕಟ್ಟಿಕೊಂಡು ಊರೂರು ತಿರುಗಿದರಲ್ಲವೆ. ಅದರಿಂದ ಹವ್ಯಾಸಿ ರಂಗಭೂಮಿ ಎನ್ನುವುದು ಜನಮನದಲ್ಲಿ ನೆಲೆಯೂರಿತು.

ಎರಡನೆಯದಾಗಿ, ಕಾಲೇಜಿನಲ್ಲಿ Poor Boys Fund ಹುಟ್ಟುಹಾಕಿದ್ದುದು. ಶ್ರೀರಂಗರನ್ನು ನಾನು ಮೊದಲಿಗೆ ಕಂಡದ್ದು ಈ ನಿಮಿತ್ತದಿಂದ(೧೯೪೪). ಬಡ ಮಧ್ಯಮ ವರ್ಗದ ಕಷ್ಟಗಳನ್ನು ಅವರು ಅರಿತಿದ್ದರು.

೧೯೩೬ರಲ್ಲಿ ವಿಜಯನಗರ ಸ್ಮಾರಕೋತ್ಸವದ ಸಹಕಾರ್ಯದರ್ಶಿಯಾಗಿ ಅವರು ಅವ್ಯಾಹತವಾಗಿ ಶ್ರಮಿಸಿದರು. ಯಾಕೆ ಬೇಕಿತ್ತು ಆ ಉಸಾಬರಿ–ಎಂದು ಕೇಳಬೇಕೆನಿಸುವುದು. ಉತ್ಸವಕ್ಕೆಂದು ಬಂದಿದ್ದ ಓರ್ವ ಆಢ್ಯ ತರುಣನು ತನ್ನ ಸೂಟ್‌ಕೇಸ್ ಕಾಣದಿದ್ದದ್ದಕ್ಕೆ ಶ್ರೀರಂಗರನ್ನು ತರಾಟೆಗೆ ತೆಗೆದುಕೊಂಡಾಗ, 'ಅಯ್ಯಾ, ಶ್ರೀರಾಮಚಂದ್ರನೇ ತನ್ನ ಹೆಂಡತಿಯನ್ನು ಕಳೆದುಕೊಂಡದ್ದು ಇಲ್ಲಿಯೇ. ಈ ಜಾಗವೇ ಅಂಥದ್ದು' ಎಂಬ 'ಸಾಂತ್ವನ' ಹೇಳಿದ್ದು ನೆನಪಾಗುತ್ತದೆ.

ಅವರು ಪತ್ರಿಕೋದ್ಯಮದಲ್ಲಿ ವಿಶೇಷವಾಗಿ ತೊಡಗಿಸಿಕೊಂಡದ್ದನ್ನೂ ಸ್ಮರಿಸತಕ್ಕುದು. ಯಾವುದೇ ಪತ್ರಿಕೆಯನ್ನು ಅವರು ಹುಟ್ಟು ಹಾಕಿ ಸಂಪಾದಿಸಲಿಲ್ಲವಾದರೂ ಜಯಂತಿ, ನರಸಿಂಹ ಮೊದಲಾದ ಪತ್ರಿಕೆಗಳಿಗೆ ನಿಯಮಿತವಾಗಿ ಅಂಕಣಕಾರರ ರೀತಿಯಲ್ಲಿ ಬರೆಯುತ್ತಿದ್ದರು. ಉದಾ: ಗೆ 'ಜಯಂತಿ' ಪತ್ರಿಕೆಯಲ್ಲಿ ಬರುತ್ತಿದ್ದ ;ಮಂಗನ ಮಲ್ಲಿನಾಥತನ' ಇತ್ಯಾದಿ. ಇವು ೧೯೩೦ ರ ದಶಕದ ಕೊನೆಯಲ್ಲಿ ಬರುತ್ತಿದ್ದವಾದ್ದರಿಂದಲೂ, ಸಾಹಿತ್ಯಿಕ ಲೇಪ ಇದ್ದುದರಿಂದಲೂ, ಶ್ರೀರಂಗರನ್ನು ಆದ್ಯ ಅಂಕಣಕಾರನ್ನಾಗಿ ಪರಿಗಣಿಸಬೇಕಾಗುವುದು. (ಆ ಮುಂಚಿನವರು ಪಂಜೆ, ಹುರಳಿ ಭೀಮರಾವ ಮತ್ತು ಕಡೆಂಗೋಡ್ಲು ಶಂಕರಭಟ್ಟರು) ಆಮೇಲೆ ೧೯೪೦, '೫೦ ರ ದಶಕದಲ್ಲಿ ಕರ್ಮವೀರ ಇತ್ಯಾದಿ ಪತ್ರಿಕೆಗಳಿಗೆ ವಿಶೇಷತಃ ಒದಗಿಸುತ್ತಿದ್ದ ಗ್ರಂಥವಿಮರ್ಶೆ. ಅಂತೂ ರಾಜಕೀಯ ವಿಡಂಬನೆ, ಸಾಹಿತ್ಯಿಕ ವಿಶ್ಲೇಷಣೆಗಳಲ್ಲಿ ಶ್ರೀರಂಗರು ಹೊಸ ಮಾರ್ಗವನ್ನೇ ಹಿಡಿದಿದ್ದರು.

ಅವರ ಇನ್ನೊಂದು ಸಾರ್ವಜನಿಕ ಕಾರ್ಯದ ಕ್ಷೇತ್ರವೆಂದರೆ ಗ್ರಂಥಾಲಯ. ಆ ವಿಷಯಕವಾದ ಆಂದೋಲನದಲ್ಲಿ ಸಾಕಷ್ಟು ತೊಡಗಿಕೊಂಡಿದ್ದರು. ಧಾರವಾಡದಲ್ಲಿ ಪ್ರಾದೇಶಿಕ ಗ್ರಂಥಾಲಯವನ್ನು ಸ್ಥಾಪಿಸಬೇಕೆಂದು ಮುಂಬಯಿ ಸರಕಾರಕ್ಕೆ ಮನವಿ ಮಾಡಿ, ಅದಕ್ಕೆ ಸಂಬಂಧಿಸಿದಂತೆ ನಿಧಿಯನ್ನು ಕೂಡಿಸುವ ಜವಾಬ್ದಾರಿಯನ್ನೂ ವಹಿಸಿದರು. ಗ್ರಂಥಾಲಯಗಳು ಅಭಿವೃದ್ಧಿಗೊಳ್ಳಬೇಕು, ಆ ಮೂಲಕ ಕನ್ನಡಿಗರಲ್ಲಿ ವಾಚನಾಭಿರುಚಿ ಬೆಳೆಯಬೇಕು–ಎಂಬುದು ಅವರ ಅಂತರ್ಯದ ಅಂಶವಾಗಿದ್ದಿತು. ಮೋಜಿನ ಒಂದು ಸಂಗತಿಯರಂದರೆ ೧೯೫೦ ರ ದಶಕದಲ್ಲಿ ಮುಂಬಯಿ ಕನ್ನಡ ವಾಚನಾಲಯ ಸಮ್ಮೇಳನ

ಕುಂದಗೋಳದಲ್ಲಿ ನೆರವೇರಿದಾಗ, ಅದರ ಉದ್ಘಾಟನಾ ಭಾಷಣವನ್ನು ಕರ್ನಾಟಕ ವಿಶ್ವವಿದ್ಯಾಲಯದ ಆಗಿನ ಕುಲಪತಿಗಳಿಗೆ ಬರೆದುಕೊಡಬೇಕಾದ ಕೆಲಸವನ್ನೂ ಮಾಡಬೇಕಾಗಿ ಬಂತು.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಕಚೇರಿಯು ಅವರ ಹಲವಾರು ಸಾಮಾಜಿಕ-ಸಾರ್ವಜನಿಕ ಕೆಲಸಗಳಿಗೆ ಆಶ್ರಯ ಸ್ಥಾನವಾಗಿದ್ದಿತು. ಸಂಘದ ಕಮಿಟಿಯ ಸದಸ್ಯತ್ವ, ಕಾರ್ಯದರ್ಶಿತ್ವ, ಕೊನೆಯಲ್ಲಿ ಕಾರ್ಯಾಧ್ಯಕ್ಷರಾಗಿ ಹತ್ತು-ಹನ್ನೆರಡು ವರ್ಷಗಳವರೆಗೆ ದುಡಿದರು. (೧೯೪೪-೪೬ ಈ ಅವಧಿಯಲ್ಲಿ ನಾನು ಸಂಘದ ಕಾರಕೂನ-ಗ್ರಂಥಪಾಲನಾಗಿ ಕೆಲಸ ಮಾಡುತ್ತಿದ್ದೆ.) ಪ್ರತಿದಿನವೂ ಶ್ರೀರಂಗರು ಸಂಜೆ ಬರುತ್ತಿದ್ದರು. ಅವರ ಇತರ ಚಟುವಟಿಕೆಗಳಿಗೆ ಅನುಗುಣವಾಗಿ ಅದೆಷ್ಟೋ ಜನರು, ವಿವಿಧ ವೃತ್ತಿಗಳಲ್ಲಿದ್ದವರು ಅವರನ್ನು ಕಾಣಲೆಂದೇ ಬರುತ್ತಿದ್ದರು. ಚರ್ಚೆ, ಹರಟೆ, ವಿನೋದ-ಏನೆಲ್ಲ. ಕನ್ನಡದ ಕೆಲಸ ಹೇಗೆ ಮಾಡಬೇಕು, ಜನರೊಡನೆ ಹೇಗೆ ವರ್ತಿಸಬೇಕು-ಮುಂತಾದ್ದನ್ನು ನಾನು ಆ ಹದಿವಯದಲ್ಲಿಯೆ ಕಲಿತಂತಾಯಿತು.

ಶ್ರೀರಂಗರು ಅಲ್ಲಿದ್ದುಕೊಂಡೇ ಇನ್ನೆರಡು ಸಂಸ್ಥೆಗಳ ಕಾರ್ಯವನ್ನು ನಿಭಾಯಿಸುತ್ತಿದ್ದರು. ಅವೆಂದರೆ ಕರ್ನಾಟಕ ಏಕೀಕರಣ ಸಮಿತಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನಾ ಸಮಿತಿ. ಅವುಗಳ ಕಾಗದಪತ್ರಗಳನ್ನು ಫೈಲು ಮಾಡುವುದರ ಮೊದಲ್ಗೊಂಡು, ಪತ್ರವ್ಯವಹಾರ, ಲೆಕ್ಕಪತ್ರ-ಎಲ್ಲವನ್ನು ಒಬ್ಬರೇ ಮಾಡುತ್ತಿದ್ದರು. ಅವುಗಳಿಗೆ ಸಂಬಂಧಿಸಿದ ಸಭೆ ಕರೆಯುವುದು, ಕೇಳಿದವರಿಗೆ ಆ ಕೆಲಸದ ಗುರುತ್ವ, ಮಹತ್ವವನ್ನು ಮನಗಾಣಿಸುವುದು-ಒಂದೇ, ಎರಡೇ, ಹಲವಾರು ರೀತಿಯಲ್ಲಿ ಅವರು ಅಕ್ಷರಶಃ ಸಂಪೂರ್ಣವಾಗಿ ತೊಡಗಿಕೊಳ್ಳುತ್ತಿದ್ದರು.

ವಿಶೇಷವೆಂದರೆ ಇವೆಲ್ಲ ಕೆಲಸಗಳಿಗಾಗಿ ದುಡ್ಡು ಕೂಡಿಸುವುದು. ಅದಕ್ಕೆ ಬೇಕಾದ ಅಧಿಕಾರಸ್ಥಾನ, ರಾಜಕೀಯ ನಾಯಕತ್ವ, ಜಾತಿಯ ಬೆಂಬಲ-ಇವಾವುದೂ ಇರಲಿಲ್ಲ. ಅಲ್ಪ ಹಣ, ಬರುವುದಿದ್ದರೂ ಧಡಪಡಿಸುತ್ತಿದ್ದರು. ನಾನು ಅಲ್ಲಿ, ಅವರ ಕೈಯಲ್ಲಿ ಕೆಲಸ ಮಾಡುತ್ತಿದ್ದಾಗ ಒಮ್ಮೆ ಅವರು ನನ್ನನ್ನು ಕುಂದಗೋಳ ಸಮೀಪದ ಕಮಡೊಳ್ಳಿ ಎಂಬ ಹಳ್ಳಿಗೆ ದುಡ್ಡು ಕೂಡಿಸಲೆಂದು ಕಳಿಸಿದ್ದು ನೆನಪಾಗುತ್ತದೆ. ಅಲ್ಲಿದ್ದ ರಂಗೇಗೌಡ ಎನ್ನುವವರು ಶ್ರೀರಂಗರಿಗೆ ಅದಾವ ಕಾರಣದಿಂದಲೊ ಗುರುತು. 'ಅವರು ನನ್ನನ್ನು ಆ ಹಳ್ಳಿಯ ಮನೆಗಳಿಗೆ ಕರೆದೊಯ್ಯುತ್ತಾರೆ. ಏಕೀಕರಣದ ವಿಷಯ ತಿಳಿಸಿ, ಅವರು ಕೊಟ್ಟಷ್ಟು ಹಣ ಇಸಕೊಳ್ಳಬೇಕು. ಮತ್ತು ನಾನು ಬ್ರಾಹ್ಮಣ ಎಂದು ತೋರಿಸಿಕೊಳ್ಳಬಾರದು! ಇವು ಶ್ರೀರಂಗರು ನನಗೆ ಕೊಟ್ಟಿದ್ದ ಸೂಚನೆಗಳು.

ಶ್ರೀರಂಗರು ರಾಜಕೀಯದಲ್ಲಿಯೂ ಒಂದಿಷ್ಟು ಕೆಲಸ ಮಾಡಬೇಕಾಗಿ ಬಂದಿತು. ನೌಕರಿಯನ್ನು ತಾವಾಗಿ ತ್ಯಜಿಸಿ, ಬಹಿರಂಗವಾಗಿ ಸತ್ಯಾಗ್ರಹ ಚಳುವಳಿಯಲ್ಲಿ ಅವರು ಭಾಗ ತೆಗೆದುಕೊಳ್ಳಲಿಲ್ಲ. ಅಂದೊಮ್ಮೆ ತಮ್ಮ ೧೮-೨-೧೯೩೨ರ ಡೈರಿಯಲ್ಲಿ "ದೇಶದ ರಾಜಕೀಯದಲ್ಲಿ ಸೇರಿಸಿಕೊಳ್ಳಬೇಕೆಂದು ಅನಿಸುತ್ತದೆ. ಅದಕ್ಕೆ ತಕ್ಕ ಯೋಗ್ಯತೆ ಇದೆಯೆಂಬ ಅಹಂಕಾರವೂ ಇದೆ. ಆದರೆ ಸಿರಿವಂತಿಕೆ ಇಲ್ಲ; ವಶೀಲಿಯೂ ಇಲ್ಲ" ಎಂದು ಉಲ್ಲೇಖಿಸಿದ್ದಾರೆ. ಹಾಗಿದ್ದರೂ ೧೯೪೨ ರ ಚಳುವಳಿಯಲ್ಲಿ ಭೂಗತರಿಗೆ ಅನನ್ವಿತ ಸಹಾಯ ಮಾಡುತ್ತಿದ್ದರು. ಬುರ್ಲಿ ಬಿಂದಾಚಾರ್ಯರು ಉಟ್ಟ ಧೋತರ, ಹೊದ್ದ ಉತ್ತರೀಯ ಎಂಬಷ್ಟೇ ಬಟ್ಟೆ ಧರಿಸುತ್ತಿದ್ದರಾದ್ದರಿಂದ 'ಬರಿಮೈ ಬುರ್ಲಿ' ಎಂದೇ ಖ್ಯಾತರಾಗಿದ್ದರು. ಆದರೆ ಚಳುವಳಿಯ ಕಾಲದಲ್ಲಿ ಅವರು ಪ್ಯಾಂಟ್ ಶರ್ಟ್ ಧರಿಸುತ್ತಿದ್ದರು-

'ಬಿಚ್ಚಿ ನೋಡಿದ್ದಾದರೆ RVJ ಎಂಬ ಶ್ರೀರಂಗರ 'ಧೋಬಿ ಮಾರ್ಕ್' ಕಾಣಬಹುದಿತ್ತು!

ಕ್ರಿ.ಶ. ೧೯೩೧ರ ಆಂದೋಲನದಲ್ಲಿಯೂ ಇವರ ಹಿನ್ನೆಲೆಯ ಪಾತ್ರ ಗಣನೀಯವಾಗಿದ್ದಿತು. ಭೂಗತ ಕಾರ್ಯಕರ್ತರನೇಕರಿಗೆ ಇವರ ಮನೆಯೇ ಆಶ್ರಯ ತಾಣವಾಗಿದ್ದಿತು. ಜಿಲ್ಲಾ ಕಾಂಗ್ರೆಸ್ ಕಚೇರಿಯ, ಅದರಂತೆ ಆಗಿನ ಪ್ರಖರ ರಾಷ್ಟ್ರಾಭಿಮಾನದ ಕರ್ಮವೀರ ಪತ್ರಿಕೆಯ ಕಾಗದ ಪತ್ರಗಳೂ ಇವರ ಮನೆಯಲ್ಲಿಯೇ ಇದ್ದುವು. ಕೆಲವು ಕಾಲ ಚಲವಳಿಯ ಮುಖಪತ್ರಿಕೆ ಹಸ್ತಪ್ರತಿ ರೂಪದಲ್ಲಿ ಸೈಕ್ಲೋಸ್ಟಾಯಿಲ್ ಯಂತ್ರದಲ್ಲಿ ಸಿದ್ಧವಾಗುತ್ತಿತ್ತು. ಆ ಯಂತ್ರ ಇವರ ಮನೆಯಲ್ಲಿಯೇ ಕೆಲಸದಲ್ಲಿ ನಿರತವಾಗಿದ್ದಿತು! ಮಾತ್ರವಲ್ಲ ಪತ್ರಿಕೆಯಲ್ಲಿ ಕಡಿಮೆ ಬಿದ್ದ ಜಾಗವನ್ನು ಲೇಖನಗಳಿಂದ ಭರ್ತಿ ಮಾಡುವ ಕೆಲಸ ಇವರದೇ!

ಕರ್ನಾಟಕ ಏಕೀಕರಣದ ನಿಮಿತ್ತವಾಗಿಯೇ ನೆಹ್ರೂ ಅಂಥವರನ್ನು ಮೆಟ್ಟಿಲ ಮೇಲೆ ತಡೆದು ನಿಲ್ಲಿಸಿ ಏಕೀಕರಣದ ಅಗತ್ಯವನ್ನೂ, ಆ ನಾಯಕರುಗಳಿಗಿದ್ದ ಸಂದೇಹಗಳನ್ನೂ ನಿವಾರಿಸಿದ ಅಪೂರ್ವ ಶ್ರೇಯಸ್ಸು ಅವರದು. ಸ್ವಾತಂತ್ರ್ಯ ಬಂದೊಡನೆ ಏಕೀಕರಣವನ್ನು ಮಾಡಲಾಗುವುದು ಎಂದು ಪಟೇಲ್, ನೆಹ್ರೂ ಪ್ರಭೃತಿಗಳು ಮಾತು ಕೊಟ್ಟಿದ್ದರು. ಅದು ನೆರವೇರುವ ಸಾಧ್ಯತೆ ಇಲ್ಲದಾಗ ನಮ್ಮ 'ಲೊಕಲ್' ಕಾಂಗ್ರೆಸ್ ನಾಯಕರು ದಿಲ್ಲಿಗೆ ಹೊರಟು ನಿಂತರು. ಮಾಹಿತಿಕೊಡಲು ಒಬ್ಬರು ಬೇಕಲ್ಲ, ಹೀಗಾಗಿ ಶ್ರೀರಂಗರು ಜೊತೆಗೂಡಿದ್ದರು. ಪ್ರಧಾನಮಂತ್ರಿಗಳಲ್ಲಿಗೆ ಇವರುಗಳು ಹೋದಾಗ, ಅವರ ಆಪ್ತಕಾರ್ಯದರ್ಶಿ 'ನೆಹ್ರೂ ಭೆಟ್ಟಿಗೆ ಒಂದು ನಿಮಿಷವೂ ಅವಕಾಶವಿಲ್ಲ' ಎಂದಾಗ ನಾಯಕರೆಲ್ಲ ಅಸಹಾಯಕರಂತೆ ನಿಂತರು. ಮೇಲೆ ಹೇಳಿದಂತೆ ಶ್ರೀರಂಗರು ತಡೆದು ನಿಲ್ಲಿಸಿ, ಹತ್ತು ನಿಮಿಷ ಕಾಲ ವಿವರಿಸಿದಾಗ "Is that so? All right, wait till afternoon" ಎಂದರಂತೆ ನೆಹ್ರೂ, ಕ್ವಿಟ್ ಇಂಡಿಯಾ ಚಳವಳಿಗೆ ಉತ್ತರವಾಗಿ ಬ್ರಿಟಿಷ್ ಸರಕಾರವು 'ಕ್ರಿಪ್ಸ್ ಮಿಶನ್' ಅನ್ನು ಭಾರತಕ್ಕೆ ಕಳಿಸಿತಷ್ಟೆ. ಆಗ ಶ್ರೀರಂಗರು ಕರ್ನಾಟಕ ಏಕೀಕರಣದ ಅಗತ್ಯವನ್ನು ಮನಗಾಣಿಸಿ ಆ ಮಿಶನ್ನಿಗೆ ಮನವಿ ಕಳಿಸಿದರು. "ಇದೀಗ ಅದನ್ನು ಖುದ್ದಾಗಿ ಟೆಲಿಗ್ರಾಮ್ ಮೂಲಕ ಕಳಿಸಿ ಬಂದೆ" ಎಂಬ ವಾಕ್ಯ ಅವರ ಡೈರಿಯಲ್ಲಿದೆ ಎಂದರೆ ಯಾವುದೇ ಸಂಸ್ಥೆಯವತಿಯಿಂದ ಅಲ್ಲ; ವೈಯಕ್ತಿಕ ನೆಲೆಯಲ್ಲಿ ಹಾಗೆ ಮಾಡಿದರೆಂಬುದನ್ನು ಗಮನಿಸಬೇಕು.

ಹೀಗೆ ಕರ್ನಾಟಕದ, ಕನ್ನಡ ಜನಕ್ಕೆ ಸಂಬಂಧಿಸಿದ ಯಾವುದೇ ಕೆಲಸವಿರಲಿ, ಪಾಲ್ಗೊಳ್ಳುತ್ತಿದ್ದರಲ್ಲದೆ, ಪ್ರಸಂಗ ಬಂದರೆ ವ್ಯಕ್ತಿಗಳ ಖಾಸಗಿ ಕೆಲಸಕ್ಕೂ ಮನಮುಟ್ಟಿ ನೆರವಾಗುತ್ತಿದ್ದರು. ೧೯೬೦ ರ ದಶಕದ ಆರಂಭದಲ್ಲಿ ಎಂದು ಕಾಣುತ್ತದೆ. ಅವರು National School of Drama ಈ ಕೇಂದ್ರ ಸಂಸ್ಥೆಯ ಸದಸ್ಯರಾಗಿದ್ದರು. ಆಗ ಹತ್ತಾರು ಕನ್ನಡಿಗರಿಗೆ ಪ್ರವೇಶ ದೊರಕುವಂತೆ ಒತ್ತಾಯ ತರುತ್ತಿದ್ದರು. ನನಗೆ ಗೊತ್ತಿದ್ದ ಸಂಗತಿ ಇದು. ಇಲ್ಲಿಯ ಒಬ್ಬ ಹೆಣ್ಣು ಮಗಳು ನಟನೆಯಲ್ಲಿ ಪ್ರವೀಣಳಿದ್ದಳು. ಆದರೆ ಸಂಗೀತ ವರ್ಜ್ಯ. ಆ ಸಂಸ್ಥೆಯಲ್ಲಿ ತರಬೇತಿ ಪಡೆದವರು ಸಂಗೀತವನ್ನೂ ತಿಳಿದಿರಬೇಕು. ಆದರೂ ಶ್ರೀರಂಗರು ಒತ್ತಾಯಪಡಿಸಿ ಆಕೆಗೆ ಪ್ರವೇಶ ದೊರಕಿಸಿಕೊಟ್ಟರು.

ಇನ್ನೀಗ ಶ್ರೀರಂಗರ ಹಿನ್ನಡೆಯ ಗತಕಥನ. ೧೯೫೬ ರಲ್ಲಿ ಏಕೀಕರಣವೇನೊ ಆಯಿತು. ಅಲ್ಪ ಸ್ವಲ್ಪ ಕೆಲಸ ಮಾಡಿದವರೂ, ಏನೂ ಮಾಡದಿದ್ದ ರಾಜಕಾರಿಣಿಗಳೂ ಅದರ ಶ್ರೇಯಸ್ಸಿನಲ್ಲಿ ಪಾಲುಗೊಂಡರು. ಅದಕ್ಕೆ ಬೇಕಾದ ಸೂಕ್ತ ತಳಪಾಯ ಹಾಕಿದ್ದ ಶ್ರೀರಂಗರನ್ನು ಮಾತ್ರ ಯಾರೂ ನೆನೆಯಲಿಲ್ಲ.

ಇನ್ನೊಂದು ಇವರ ಕಾರ್ಯಕ್ಷೇತ್ರ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆ. ಆ ಕಾರ್ಯಸಾಧನೆ ಸಮಿತಿಗೆ ಅವರೇ ಕಾರ್ಯದರ್ಶಿಗಳಾಗಿ ಅಖಂಡ ದುಡಿದರು. ೧೯೪೯ ರಲ್ಲಿ ವಿಶ್ವವಿದ್ಯಾಲಯವು ಅಸ್ತಿತ್ವದಲ್ಲಿ ಬಂದಿತಷ್ಟೆ. ಆಗೂ ಶ್ರೀರಂಗರ ಪ್ರಸ್ತಾಪವೇ ಇಲ್ಲ! ಮುಂದಿನದು ಕೇಳಿರಿ. ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದಲ್ಲಿ ಪ್ರಾಧ್ಯಾಪಕ ಹುದ್ದೆ ತೆರವಾಗಿದ್ದಿತು. ಇಪ್ಪತ್ತು ವರ್ಷ ಸಂಸ್ಕೃತದ ಪಾಠವನ್ನು ಕರ್ನಾಟಕ ಕಾಲೇಜಿನಲ್ಲಿ ನಡೆಸಿಕೊಟ್ಟಿದ್ದ ಶ್ರೀರಂಗರಿಗಿಂತ ಅನುಭವಿಗಳು ಯಾರೂ ಇರಲಿಲ್ಲ. ಶ್ರೀರಂಗರೇನೊ ಅರ್ಜಿ ಹಾಕಿ ಸಂದರ್ಶನವಿತ್ತರು. ಆದರೆ ಆಯ್ಕೆ ಆಗಲಿಲ್ಲ! ಕಾರಣ? ಆಯ್ಕೆ ಸಮಿತಿಯಲ್ಲಿಯ ಒಬ್ಬ ಸದಸ್ಯರಿಗೆ ಶ್ರೀರಂಗರ ಬಗ್ಗೆ ಅದೇನೊ ವಿರಸ.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿಯಂತೂ ೧೧-೧೨ ವರ್ಷ ತನುಮನದಿಂದಲ್ಲದೆ ಹಣ ಸಂಗ್ರಹಿಸುವಲ್ಲಿಯೂ ದುಡಿದಿದ್ದರು. ಅದರ ಪತ್ರಿಕೆ 'ವಾಗ್ಭೂಷಣ'ವನ್ನು ಪುನರುಜ್ಜೀವಿಸಿದರು. ಸಂಘದ ೫೦ ವರ್ಷಗಳ ವರದಿಯನ್ನು ಬರೆದಿದ್ದರು. ಒಂದೇ ಎರಡೇ ಅವ್ಯಾಹತವಾಗಿ ಕೆಲಸ ಮಾಡಿದ್ದರು. ಕ್ರಿ.ಶ. ೧೯೪೯ ರಲ್ಲಿ ವಾರ್ಷಿಕ ಚುನಾವಣೆಯಲ್ಲಿ ಶ್ರೀರಂಗರಿಗೆ ಬೇಕಾಗಿದ್ದವರೇ ಅವರನ್ನು ಹಿಂದೊತ್ತಿದ್ದರು; ಹೊರಗೆ ಹಾಕಿದರು. ಇದೆಲ್ಲದರಿಂದ ನೊಂದ ಶ್ರೀರಂಗರು ತಮ್ಮ ಡೈರಿಯಲ್ಲಿ ೩೦-೧-೧೯೫೨ ರಲ್ಲಿ ಬರೆದರು: "ಕರ್ನಾಟಕದಲ್ಲಿ ಯಾರಿಗೂ ನನ್ನಿಂದ ಕೆಲಸ ಪಡೆಯುವುದು ಬೇಡ. ನಾನೇನೊ ಹುಚ್ಚು ಹಟದಿಂದ ಕರ್ನಾಟಕದಲ್ಲಿ ಉಳಿದು ಕೆಲಸ ಮಾಡಿದೆ..." ಹಾಗೆಂದು ಅವರ ಸಾಮಾಜಿಕ ಕಳಕಳಿಯೇನೂ ಕಡಿಮೆಯಾಗಿರಲಿಲ್ಲ. ಬದುಕಿನಲ್ಲಿ ನಿರಾಸೆಯನ್ನು ತಳೆದಿರಲಿಲ್ಲ.

ಅಲ್ಲಿಂದ ಶ್ರೀರಂಗರ ನಿರುದ್ಯೋಗ ಪರ್ವದ ಆರಂಭ. ನಾನು ಆಗ ಮುಂಬಯಿಯಲ್ಲಿ ನೆಲೆಸಿದ್ದೆ. ಒಮ್ಮೆ ಧಾರವಾಡಕ್ಕೆ ಬಂದಿದೆ. ಶ್ರೀರಂಗರು ದಾರಿಯಲ್ಲಿ, ದ.ಬಾ. ಕುಲಕರ್ಣಿಯವರ ಅಂಗಡಿಯ ಬಳಿ ಸಿಕ್ಕಿದರು. ಅರ್ಧ ಪ್ಯಾಂಟಿನ ವೇಷ, ಮಾಸಿದ ತಲೆಗೂದಲು; ಬಾಡಿದ ಮುಖ. ಹೊಟ್ಟೆಯಲ್ಲಿ ಸಂಕಟವಾಯಿತು. ದ. ಬಾ. ಅವರ ಪುಸ್ತಕದ ಅಂಗಡಿ ಎಂದೆನಷ್ಟೆ. ಆಗಿನ ದಿನಗಳಲ್ಲಿ ಶ್ರೀರಂಗರು ಅವರಲ್ಲಿ ೫ರೂ.ಅನ್ನು ಕಡವಾಗಿ ಕೇಳಿದ್ದು; ರೇಶನ್ ತರಲು ಉಪಯೋಗವಾಗಲೆಂದು, ಈ ಹಣ ಐವತ್ತು ರೂ.ಗೆ ಸಮಾನವಾದದ್ದು- ಎಂದದ್ದು, ಆಗ ದ.ಬಾ. ೧೫ ರೂ. ಕೊಟ್ಟದ್ದು -ನೆನಪಾಗುತ್ತದೆ.

ಅದಾಗಿ ಕಲೋದ್ಧಾರಕ ನಾಟಕ ಸಂಘದ ವತಿಯಿಂದ 'ಕಣ್ಣುಗಳು' ಎಂಬ ನಾಟಕ ಪ್ರದರ್ಶಿತವಾಗಿದ್ದಿತು (೧೯೫೯). ಅದು ಮರಾಠೀ ನಾಟಕವೊಂದರ ಅನುವಾದ. ನಾವಂತೂ ಯಶಸ್ವಿಯಾಗಿ ಪ್ರದರ್ಶಿಸಿದ್ದೆವು. ಆ ಉಬ್ಬಿನಲ್ಲಿ ಅದನ್ನು ಮುದ್ರಿಸಬೇಕು; ಶ್ರೀರಂಗರಿಂದ ಮುನ್ನುಡಿ ಬರೆಯಿಸಬೇಕೆಂದು ಯೋಚಿಸಿ ಅವರ ಮನೆಗೆ ಹೋದೆ. "ಮುನ್ನುಡಿ ಬರೀತೇನೆ, ಆದರೆ ಅದಕ್ಕೆ ಸಂಭಾವನೆ ಕೇಳಿದರೆ ಬೇಸರವಿಲ್ಲ ತಾನೇ. ಹಾಗೆ ನೋಡಿದರೆ ಮುನ್ನುಡಿಗಾಗಿ ಸಂಭಾವನೆಯನ್ನು ನಾನು ಬಯಸೋದು, ಇದೇ ಮೊದಲ ಬಾರಿ" ಎಂದರು.

ಇದರ ಹಿಂದಿದ್ದ ಅವರ ಆರ್ಥಿಕ ದುಃಸ್ಥಿತಿ ಕಣ್ಣಿಗೆ ಕಟ್ಟಿತು. "ಕೊಡ್ತೇನಿ" ಎಂಬ ಮೂರು ಅಕ್ಷರ ಉಚ್ಚರಿಸಲಿಕ್ಕೂ ನನ್ನಿಂದಾಗಲಿಲ್ಲ. ಬರಿಯ 'ಹ್ಞೂ' ಅಂದೆ. ಒಂದು ವಾರದ ಅನಂತರ ಬಾ ಅಂದಿದ್ದರು. ಹೋದೆ; ಬರೆದು ಇಟ್ಟಿದ್ದರು. ಮನೆಗೆ ಬಂದು ಓದಿದೆ. ಸಂಭಾವನೆ ಬೇರೆ ಕೊಟ್ಟಿದ್ದೆ! ಸಾಕಷ್ಟು ಮೆಚ್ಚಿಕೆಯ ಮಾತುಗಳನ್ನು ಬರೆದಿದ್ದಾರೆ ಎಂದು ಬಗೆದಿದ್ದೆ. ಇಲ್ಲ; ಇಲ್ಲ ನಾವು ಮೂಲದಿಂದ ಮಾಡಿಕೊಂಡ

ಬದಲಾವಣೆಗಳ ಬಗ್ಗೆ ಚೆನ್ನಾಗಿ ಬೈದಿದ್ದರು.

ಅವರ ದಿನಚರಿಯ ೨೫-೨-೧೯೫೨ನೆಯ ದಿನದಲ್ಲಿ ಬಂದು ಕೆಲವು ಮಾತುಗಳನ್ನು ನಿಮಗೆ ಹೇಳಬೇಕೆನಿಸುವುದು. ಆಗ ಅವರಿಗೆ ೫೨ನೆಯ ವರುಷ.

-ಜನವರಿಯಲ್ಲಿ ಬರೆದ ಲೇಖನಗಳ ಸಂಭಾವನೆಯನ್ನು ಕಳಿಸಲು ಸಂಯುಕ್ತ ಕರ್ನಾಟಕದವರಿಗೆ ವಿನಂತಿಸಿದ್ದೆ. ಆ ದಿನ ಸೋಮವಾರ. ಪೋಸ್ಟ್ ಆಫೀಸಿಗೆ ಹೋದೆ. ಆದರೆ ಆ ಪತ್ರ ಬಂದಿರಲಿಲ್ಲ.

-ಮರುದಿನ ಅದೇ ಆಶಾಭಾವದಿಂದ ಮತ್ತೆ ಪೋಸ್ಟ್ ಆಫಿಸಿಗೆ ಹೋದೆ. ಸಂ.ಕ. ದವರಿಂದ ಅವತ್ತೂ ಬಂದಿರಲಿಲ್ಲ. ಆ ದಿನ ರೇಶನ್ ತರಲೇಬೇಕಿತ್ತು. ಪೋಸ್ಟ್‌ಮನ್ ಜಯಹಿಂದ್ ಪತ್ರಿಕೆಯವರಿಂದ ಬಂದ ಒಂದು ಪತ್ರ ಕೊಟ್ಟುಹೋದ. ಮಾಮೂಲಿಯಾದಿರಬೇಕೆಂದು ತೆರೆದು ನೋಡಿದೆ ೧೦ರೂ. ಚೆಕ್! ಮೂರು ದಿನಗಳನ್ನು ಹೇಗೊ ಕಳೆದೆ.

-ಮರುವಾರ ಮತ್ತೆ ಬರಿಗೈ. ಆಕಾಶವಾಣಿಯವರು ಮಂತ್ರಿ ದಿವಾಕರರು ಬಂದಾಗ ಒಂದು ಸಭೆ ಕರೆದಿದ್ದರು. ಕೆಲ ದಿನಗಳ ಹಿಂದೆ ಅದರ ಟಿ.ಎ. ರೂಪದಲ್ಲಿ ಮೂರು ರೂಪಾಯಿ.

- ಇವತ್ತು (ಅಂದರೆ ೨೫-೨ಕ್ಕೆ) ಮತ್ತೆ ಬರಿಗೈ. ಬೆವರು ಕೂಡಾ ಬರದಷ್ಟು ಬರಿಗೈಯಾಗಿದೆ. ಈ ಕೊನೆಯ ವಾಕ್ಯ ಅವರು ಅನುಭವಿಸಿದ ಕಷ್ಟದ ದೈನ್ಯದ ಪರಿಸ್ಥಿತಿಯನ್ನು ಮಾರ್ಮಿಕವಾಗಿ ಚಿತ್ರಿಸುವಂತಿದೆ.

ಆಗಿನ ಅನೇಕ ಮಧ್ಯಮ ವರ್ಗದ ವಿದ್ಯಾವಂತರು ಸುರುವಿಗೆ ಕಾಷ್ಟ ಬಡತನವನ್ನು ಅನುಭವಿಸಿದವರೇ ಆಗಿದ್ದರು. (ನನಗೂ ಅನ್ವಯಿಸುತ್ತದೆ.) ಆದರೆ ಮಧ್ಯಮೋತ್ತರ ವಯಸ್ಸಿನಲ್ಲಿ, ಸಂಸಾರ ಸಮೇತ ಬಾಳುವೆ ಮಾಡಬೇಕಾದ ಕಾಲದಲ್ಲಿ ಈ ಬಡತನ ವ್ಯಕ್ತಿಯನ್ನು ಕಿತ್ತು ತಿನ್ನುವ ಪ್ರಸಂಗ ಶ್ರೀರಂಗರೊಬ್ಬರಿಗೇ ಬಂದಿತ್ತೇನೊ.

ಯಾಕೆ ಹೀಗಾಯಿತು? ಸಾಹಿತ್ಯ ಸೃಷ್ಟಿಗೆ ಬೇಕಾದ ಪ್ರತಿಭೆ ಅಖಂಡವಾಗಿ ಇದ್ದಿತು. ನಾಯಕನಾಗುವ ಯೋಗ್ಯತೆ ಇತ್ತು. ಲೋಕಾನುಭವವಂತೂ ಅನನ್ವಿತ. ಆದರೂ ಇಡೀ ಹತ್ತು ವರ್ಷ (೧೯೫೦ ರ ದಶಕದ ಒಳಹೊರಗೆ) ಒದ್ದಾಡಿದರು. ಅದು ಅವರ ಚೇತನವನ್ನೇನೂ ಕಮರಿಸಲಿಲ್ಲ. ಪ್ರಾಯಶಃ ಅವರ ಬುದ್ಧಿ ಪ್ರಖರತೆ, ಅತೀವ ಸ್ವಾಭಿಮಾನ, ಜನರಲ್ಲಿ, ಸ್ನೇಹಿತರೆನ್ನುವವರಲ್ಲಿ ಅತೀವ ವಿಶ್ವಾಸ- ಹೀಗಾಗಿ ಇಂಥ ಪರಿಸ್ಥಿತಿ ಬಂದೊದಗಿತೇನೊ. ಹೀಗೇ ಎಂದು ಹೇಳುವುದು ಕಷ್ಟ.

ಆದರೆ ತಮ್ಮ ಈ ಅಯಶಸ್ಸಿಗೆ 'ಸಾಹಿತಿಯ ಆತ್ಮಜಿಜ್ಞಾಸೆ'ಯಲ್ಲಿ ಸೊಗಸಾದ ಮಾರ್ಮಿಕವಾದ ಸದೃಶ್ಯವನ್ನು ಕೊಟ್ಟಿದ್ದಾರೆ. ಈರ್ವರು ಪ್ರಣಯಿಗಳು; ಗಾಢವಾದ ಪ್ರೇಮ. ಮದುವೆಯಾಗುವ ಭರವಸೆಯೂ ಇದ್ದಾಗ....ಕನ್ಯೆ ಬಸಿರಾಗುತ್ತಾಳೆ. ಆದರೆ ಅವಳ ಮದುವೆ ಬೇರೊಬ್ಬನೊಡನೆ ಆಗುತ್ತದೆ. ಜನಿಸಿದ ಮಗುವಿನ ತಂದೆಗೆ, ಆ ಮಗುವಿನ ಮೇಲಿನ ಹಕ್ಕು ಏನೂ ಇರದಿದ್ದರೂ ತೃಪ್ತಿ ಇರ್ತದೆ; ಮಗುವಿನ ಬಗ್ಗೆ ಹೆಮ್ಮೆ ಉಳಿಯುತ್ತದೆ. ತನ್ನ ಸಾಮಾಜಿಕ ನಿಷ್ಠೆಗೆ ದೊರೆತ ಪ್ರತಿಫಲ ಇಂಥದು- ಎಂದು ಅವರು ಪ್ರಾಮಾಣಿಕವಾಗಿ ನಂಬಿದ್ದರು. (ಸಾಭಾರ : ಸಂಕಲನ)

* * *

ದಲಿತರ ಹೋರಾಟಕ್ಕೆ ನಿದ್ದೆ ಮಾತ್ರೆ !

– ಡಾ.ಬಿ.ಎಂ. ಪುಟ್ಟಯ್ಯ

ಹೌದು, ಅದೊಂದು ಕಾಲವಿತ್ತು. ಏಪ್ರಿಲ್ ೧೪ ದಲಿತ ಸಂಘಟನೆಗಳ ಅಭಿಮಾನದ ದಿನವಾಗಿತ್ತು. ಕೇರಿಕೇರಿಗಳಲ್ಲಿ ಅಂಬೇಡ್ಕರ್ ಬಗೆಗಿನ ಗೌರವ. ಭರ್ತಿ ಸ್ವಾಭಿಮಾನ. ಅವೆಲ್ಲಾ ಹೋರಾಟದ ಕಿಚ್ಚಾಗಿ ದಲಿತರ ಹೃದಯಗಳನ್ನು ತಟ್ಟುತ್ತಿತ್ತು. ಅಂದು ತಮ್ಮ ಕೂಲಿ ಕೆಲಸ ಬಿಟ್ಟು ದಲಿತರು ನಡೆಸುತ್ತಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮಕ್ಕೆ ಹೋಗುತ್ತಿದ್ದರು. ಶತಮಾನಗಳಿಂದ ಶೋಷಕ ವ್ಯವಸ್ಥೆ ಅವರಲ್ಲಿ ಅದುಮಿಟ್ಟ ಅಸಹನೆ, ಆಕ್ರೋಶಗಳನ್ನು ಮೆರವಣಿಗೆಯ ಘೋಷಣೆಗಳನ್ನು ಮೆಲುಕು ಹಾಕುತ್ತಿದ್ದರು. ಹೋರಾಟದ ಹಾಡುಗಳನ್ನು ಹಾಡುತ್ತಿದ್ದರು. ಅಂಬೇಡ್ಕರರ ಜೀವನ, ಹೋರಾಟವನ್ನು ಮೆಲುಕು ಹಾಕುತ್ತಿದ್ದರು. ನಮ್ಮವನೊಬ್ಬ ಇಂತಹ ಪುಣ್ಯಾತ್ಮನಿದ್ದನೆ ಎಂದು ಆಶ್ಚರ್ಯಪಡುತ್ತಿದ್ದರು. ಶೋಷಕರು ತಮ್ಮ ಮೇಲೆ ನಡೆಸುತ್ತಿರುವ ಶೋಷಣೆ, ಅಪಮಾನ, ದೌರ್ಜನ್ಯಗಳಿಗೆ ಕಾರಣಗಳೇನು? ಅಂಬೇಡ್ಕರ್ ಹೋರಾಟ ಹೇಗಿತ್ತು, ಮುಂದೆ ತಾವೇನು ಮಾಡಬೇಕೆಂಬುದನ್ನು ಮನವರಿಕೆ ಮಾಡಿಕೊಳ್ಳುತ್ತಿದ್ದರು.

ಕಳೆದ ಶತಮಾನದ ೭೦ರ ದಶಕದಲ್ಲಿ ಭಾರತದಾದ್ಯಂತ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಾಗಿ ಶೋಷಿತರ ಹೋರಾಟಗಳು ಶುರುವಾದವು. ಇಂತಹ ಕೆಲವು ಹೋರಾಟಗಳು ಅಂಬೇಡ್ಕರರ ಆಲೋಚನೆ ಮತ್ತು ಅವರ ಹೋರಾಟಗಳಿಂದ ಸ್ಫೂರ್ತಿ ಪಡೆದಿದ್ದವು. ಹಿಂದಿ, ತೆಲುಗು, ತಮಿಳು ಭಾಷೆಗಳಿಗೆ ಅಂಬೇಡ್ಕರರ ಬರಹಗಳು ಅನುವಾದವಾದವು. ಕರ್ನಾಟಕದಲ್ಲಿ ದಲಿತ ಹೋರಾಟ ಮೆತ್ತಗಾದ ಮೇಲೆ ಅಂಬೇಡ್ಕರರ ಬರಹಗಳು ಕನ್ನಡಕ್ಕೆ ಬಂದವು. ಜೊತೆಗೆ ವಿವಿಧ ಭಾಷೆಗಳಲ್ಲಿ ಅಂಬೇಡ್ಕರ್ ಕುರಿತ ವೈಚಾರಿಕ ಮತ್ತು ಸೃಜನಾತ್ಮಕ ಸಾಹಿತ್ಯವೂ ಬಂತು.

೧೯೯೦-೯೧ ರಲ್ಲಿ ಅಂಬೇಡ್ಕರ್ ಅವರಿಗೆ ಕೇಂದ್ರ ಸರಕಾರ 'ಭಾರತ ರತ್ನ' ಪ್ರಶಸ್ತಿ ಘೋಷಿಸಿ, ಏಪ್ರಿಲ್ ೧೪ನ್ನು ಕೇಂದ್ರ ಸರ್ಕಾರಿ ರಜೆಯನ್ನಾಗಿಯೂ ಘೋಷಿಸಿತು. ಇದರಿಂದ ದಲಿತ ಚಿಂತಕರ ಹೋರಾಟಗಾರರ ಸಂಭ್ರಮ ಸ್ವರ್ಗ ಮುಟ್ಟಿತು. ಅಂಬೇಡ್ಕರರ ವಿಚಾರಗಳನ್ನು ಮತ್ತು ಅವರು ನಡೆಸಿದ ಹೋರಾಟಗಳನ್ನು ಸರ್ಕಾರವೇ ಮುಂದೆ ನಿಂತು ಪರಿಚಯ ಮಾಡಿಸುತ್ತಿರುವಾಗ ನಮಗೇನು ಕೆಲಸ ಎಂದುಕೊಂಡರು. ಅನೇಕ ವಿಶ್ವವಿದ್ಯಾಲಯಗಳಲ್ಲಿ ಅಂಬೇಡ್ಕರ್ ಅಧ್ಯಯನ ಪೀಠ/ ಸಂಸ್ಥೆಗಳು ಆರಂಭವಾದವು. ರೋಡು, ಕೇರಿ, ಓಣಿ, ಹಾಸ್ಟೆಲ್‌ಗಳಿಗೆ ಅಂಬೇಡ್ಕರ್ ಹೆಸರಿಡಲಾಯಿತು. ಇವೆಲ್ಲವೂ ದಲಿತರಿಗೆ ಭಾವನಾತ್ಮಕವಾಗಿ ಖುಷಿಕೊಟ್ಟವು.

ಆದರೆ ಈ ಕೆಲಸ ಅಂಬೇಡ್ಕರರನ್ನು ದಲಿತರಿಂದ ಮತ್ತು ದಲಿತ ಹೋರಾಟಗಳಿಂದ ಪ್ರತ್ಯೇಕಿಸಿ ದೂರ ಮಾಡಿತು. ಉದಾಹರಣೆಗೆ, ದಲಿತರು ತಮ್ಮ ಊರುಕೇರಿಗಳಲ್ಲಿ ಮಾಡುವ ಹಬ್ಬ ಹರಿದಿನಗಳನ್ನು ನೇರವಾಗಿ ಸರ್ಕಾರವೇ ವಹಿಸಿಕೊಂಡು, ಅದನ್ನು ಅವರ ಕೇರಿಯಿಂದ ಪ್ರತ್ಯೇಕಿಸಿ ಮಾಡುತ್ತದೆನ್ನಿ. ಅದಕ್ಕೆ ದಲಿತರನ್ನೂ ಕರೆಯುತ್ತದೆ ಎಂದುಕೊಳ್ಳೋಣ. ಇದು ದಲಿತರಿಗೆ ಮುಜುಗರ, ನಾಚಿಕೆ ಮತ್ತು ಅವಮಾನ ಉಂಟುಮಾಡುವುದಿಲ್ಲವೇ ? ಇಂದು ಅಂಬೇಡ್ಕರ್ ಜಯಂತಿಯ ಪರಿಸ್ಥಿತಿ ಕೂಡ

ಅದೇ ಆಗಿದೆ. ಅದನ್ನು ಕೇರಿಗಳಿಂದ, ದಲಿತ ಸಂಘಟನೆಗಳಿಂದ ಮತ್ತು ದಲಿತರಿಗೆ ಬೇಕಾಗಿರುವ ವಿಚಾರಗಳಿಂದ ಬೇರ್ಪಡಿಸಿ ಶೋಷಕರ ಕಾರ್ಯಕ್ರಮವನ್ನಾಗಿ ಮಾಡಲಾಗಿದೆ. ಒಂದು ಕಾಲದಲ್ಲಿ ಅಂಬೇಡ್ಕರ್ ಜಯಂತಿ ದಲಿತರನ್ನು ಹೋರಾಟಕ್ಕೆ ಬಡಿದೆಬ್ಬಿಸುತ್ತಿತ್ತು. ಇಂದು ಅದೇ ಅಂಬೇಡ್ಕರ್ ಜಯಂತಿ ದಲಿತರನ್ನು ಹೊಸ ಶೋಷಣೆಗೆ ನಯವಾಗಿ ಹೊಂದಿಕೊಳ್ಳುವ ಕೆಲಸ ಮಾಡುತ್ತಿದೆ. ಶೋಷಕ ಸರ್ಕಾರ ನಡೆಸುವ ಯಾಂತ್ರಿಕ ಅಂಬೇಡ್ಕರ್ ಜಯಂತಿಗೆ ದಲಿತರು ಬಾಡಿಗೆಯ ಸಭಿಕರಾಗಿ ಹೋಗುತ್ತಿರುವುದು ವಿಷಾದದ ವಿಚಾರ.

ಶೋಷಕ ಸಮಾಜದಲ್ಲಿ ಅಂಬೇಡ್ಕರ್ ಶೋಷಿತರ ಆಶಾಕಿರಣ. ಶೋಷಿತರ ಧ್ವನಿ. ಅವರ ಜೀವನವೇ ಒಂದು ಹೋರಾಟ. ಶೋಷಿತರಿಗೆ, ದಲಿತರಿಗೆ ಹೋರಾಟದ ಪರಂಪರೆ ಬೇಕಾಗಿದೆ. ಅಂಬೇಡ್ಕರ್ ಹೋರಾಟದ ಪರಂಪರೆಯನ್ನು ಆರಂಭಿಸಿದ್ದರು. ೭೦ರ ದಶಕದಲ್ಲಿ ಶುರುವಾದ ದಲಿತ ಹೋರಾಟಗಳು ಆ ಪರಂಪರೆಯನ್ನು ಪ್ರಜ್ಞಾಪೂರ್ವಕವಾಗಿ ಸ್ವೀಕರಿಸಿದ್ದವು. ಆಳುವ ವರ್ಗಕ್ಕೆ ಇದರ ಸೂಕ್ಷ್ಮ ಗೊತ್ತಾಗಿ, ದಲಿತರು ಅಂಬೇಡ್ಕರರ ಹೋರಾಟದ ಪರಂಪರೆಯಿಂದ ಪ್ರಭಾವ ಪಡೆಯದಂತೆ ಮಾಡಿತು. ಕೇಂದ್ರ ಸರಕಾರ ೮೦ರ ದಶಕದಲ್ಲಿ ಹೊಸ ಶೋಷಕ ಆರ್ಥಿಕ ನೀತಿಗಳನ್ನು ಜಾರಿ ಮಾಡಿ ಕೃಷಿಯನ್ನು ಕೈಗಾರಿಕೆಗೆ ಅಧೀನಗೊಳಿಸಿತು. ಪರಿಣಾಮವಾಗಿ ದೇಶದಾದ್ಯಂತ ಮೊದಲ ಹಂತದಲ್ಲಿ ದಲಿತರು ಕೃಷಿ ವಲಯದಲ್ಲಿ ಮೊಟ್ಟಮೊದಲ ಬಾರಿಗೆ ಭಾರಿ ಪ್ರಮಾಣದಲ್ಲಿ ನಿರುದ್ಯೋಗಿಗಳಾದರು.

ಆಳುವ ವರ್ಗ ೯೦ರ ದಶಕದಲ್ಲಿ ನೇರವಾಗಿ ಸಾಮ್ರಾಜ್ಯಶಾಹಿ ಶೋಷಿಣೆಯ ನೀತಿಗಳನ್ನು ಜಾರಿಗೊಳಿಸಿತು. ಇಡೀ ದೇಶದ ದುಡಿವ ವರ್ಗದ ಜೀವನವನ್ನು ಅಲ್ಲೋಲಕಲ್ಲೋಲ ಮಾಡಿತು. ಜಾಗತೀಕರಣವೇ ಅಭಿವೃದ್ಧಿ ಎಂದಿತು. ಅಂಬೇಡ್ಕರರಿಂದ ರಚನೆಯಾಯಿತೆಂದು ಹೇಳಲಾಗುವ ಸಂವಿಧಾನವನ್ನು ಸಂಪೂರ್ಣ ಗಾಳಿಗೆ ತೂರಿತು. ಇದರ ಪರಿಣಾಮವಾಗಿ ದಲಿತರ ಹಸಿವು ಮತ್ತು ಅಪಮಾನಗಳು ತೀವ್ರಗೊಂಡವು. ದುಡಿವ ವರ್ಗ ದಲಿತರಲ್ಲಿ ಹತಾಶೆ, ಅಸಹನೆ ಮತ್ತು ಆಕ್ರೋಶಗಳು ಮಡುಗಟ್ಟಿದವು. ಇವನ್ನು ಹೊಟ್ಟೆ ತುಂಬಿದ ದಲಿತರ ಮೂಲಕ ಶಮನಗೊಳಿಸುವ ಹುನ್ನಾರವಾಗಿ ಅದೇ ೯೦ರ ದಶಕದಲ್ಲಿ ಅಂಬೇಡ್ಕರರಿಗೆ 'ಭಾರತ ರತ್ನ' ಪ್ರಶಸ್ತಿ ಘೋಷಿಸಿತು. ಕಳೆದ ೧೫ ವರ್ಷಗಳಿಂದ ಕೃಷಿ ವಲಯವನ್ನು ಒಳಗೊಂಡಂತೆ ಬಹುತೇಕ ಕ್ಷೇತ್ರಗಳಲ್ಲಿ ನಿರುದ್ಯೋಗ ಸೃಷ್ಟಿಯಾಗಿದೆ. ದಲಿತರು ಕೂಲಿಗಾಗಿ, ತುತ್ತು ಅನ್ನಕ್ಕಾಗಿ ವಲಸೆ ಹೋಗುತ್ತಿದ್ದಾರೆ ಇಲ್ಲವೆ ಅಸಹಾಯಕರಾಗಿ ನಲುಗಿ ಹೋಗಿದ್ದಾರೆ. ದಲಿತ ಹೋರಾಟಗಳಿಗೆ ಸರ್ಕಾರಗಳೇ ಉಚಿತವಾಗಿ ನಿದ್ದೆ ಮಾತ್ರೆ ಕೊಟ್ಟಿವೆ. ಅವೆಲ್ಲ ಈಗ ಜೊಂಪು ನಿದ್ದೆಯಲ್ಲಿ ಹೊಟ್ಟೆ ತುಂಬಿದವರ ಬಗ್ಗೆ ಮತ್ತು ಹೊಟ್ಟೆ ತುಂಬಿದ ದಲಿತರ ಬಗ್ಗೆ ಚಿಂತಿಸುತ್ತಿವೆ. ಬಡವರಿಗೆ ಪಡಿತರ ಚೀಟಿಗಳನ್ನು ನ್ಯಾಯವಾಗಿ ಕೊಡದ ಸರ್ಕಾರ 'ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ' ಯೋಜನೆಯನ್ನು ಜಾರಿಗೊಳಿಸಿತು. ಈಗ 'ಪರೀಕ್ಷೆಗಳಲ್ಲಿ ೬೦ ಅಂಕಗಳನ್ನು ತೆಗೆಯದಿದ್ದರೆ ವಿದ್ಯಾರ್ಥಿ ವೇತನ ನಿಷಿದ್ಧ' ಎಂಬ ಕಾನೂನಿನ ನೆಪದಲ್ಲಿ ದಲಿತರನ್ನು ಶಿಕ್ಷಣದಿಂದ ಹೊರಗಿಡುವ ತಂತ್ರ ಹೂಡಿದೆ. ಸಾಮಾಜಿಕ ನ್ಯಾಯದ ಹೆಸರು ಹೇಳಿಕೊಂಡೇ ಮಿಸಲಾತಿಯನ್ನು ಸರ್ವನಾಶ ಮಾಡುತ್ತಿದೆ.

ಮೀಸಲಾತಿಯ ಅಗತ್ಯವನ್ನು ಒತ್ತಿ ಹೇಳಿರುವ ಸಂವಿಧಾನದ ತತ್ವವನ್ನು ಸಮಾಧಿ ಮಾಡಿದೆ. ಜೊತೆಯಲ್ಲೇ ಅಂಬೇಡ್ಕರರನ್ನು 'ಸಂವಿಧಾನ ಶಿಲ್ಪಿ' ಎಂದು ಕೊಂಡಾಡುತ್ತಿದೆ. ಶೊಷಿತರ ಬದುಕು ದಿವಾಳಿಯೆದ್ದು ಹೋಗಿರುವಾಗ ಇದು ಗೊತ್ತಿದ್ದೂ ಗೊತ್ತಿಲ್ಲದಂತೆ ನಟಿಸಿ, ಹೊಟ್ಟೆ ತುಂಬಿದ ದಲಿತರ ಶಹಬ್ಬಾಸ್‌ಗಿರಿ ಪಡೆಯಲು ಕೆಲವು ದಲಿತೇತರ ಚಿಂತಕರು ದಲಿತರನ್ನು ದಾರಿ ತಪ್ಪಿಸುವಂತಹ ಸರ್ಕಾರಿ ನೀತಿಗಳನ್ನು ಬೆಂಬಲಿಸುತ್ತಿದ್ದಾರೆ.

ದಲಿತರಲ್ಲಿ ಹೊಟ್ಟೆ ತುಂಬಿದವರು ಮತ್ತು ಹೊಟ್ಟೆ ತುಂಬದವರು ಎಂಬ ಎರಡು ವರ್ಗಗಳು ನಿರ್ಮಾಣವಾಗಿವೆ. ಹೊಟ್ಟೆ ತುಂಬಿದ ದಲಿತರ ಮೂಲಕ ಆಳುವ ವರ್ಗಗಳು ಅಂಬೇಡ್ಕರ್ ತೋರಿಸಿದ ದಾರಿಯನ್ನು ನಯವಾಗಿ ತಿರುಚುತ್ತಿವೆ. ಹೊಟ್ಟೆ ತುಂಬಿದ ದಲಿತರು ಆಳುವ ವರ್ಗದ ಹಿತಾಸಕ್ತಿಗೆ ಅನುಗುಣವಾಗಿ ಅಂಬೇಡ್ಕರರನ್ನು ವಿವರಿಸುತ್ತಿದ್ದಾರೆ. ಅಂಬೇಡ್ಕರರನ್ನು ಕೇರಿಗಳ ಸಂಕಟಗಳಿಂದ ಬೇರ್ಪಡಿಸಿ ಶೋಷಕರ ಪರ ವಕಾಲತ್ತು ವಹಿಸುವ ಸಂಕೇತವನ್ನಾಗಿ ಮಾಡಿದ್ದಾರೆ. ಅಂಬೇಡ್ಕರರ ಆಲೋಚನೆಯ ಮತ್ತು ಹೋರಾಟದ ಕೇಂದ್ರಭಾಗ ಏನಿತ್ತೊ ಅದನ್ನು ಸಂಪೂರ್ಣ ಮುಚ್ಚಿಡಲಾಗಿದೆ. ಅಂಬೇಡ್ಕರರು ಭೂಮಿ ಮತ್ತು ಸಂಪತ್ತನ್ನು ಕುರಿತು ತಾಳಿದ್ದ ನಿಲುವನ್ನು ಯಾವ ದಲಿತ ಚಿಂತಕರೂ, ದಲಿತ ಹೋರಾಟಗಳೂ ಪ್ರಸ್ತಾಪ ಮಾಡುತ್ತಿಲ್ಲ. ಅಂಬೇಡ್ಕರ್ ತಮ್ಮ ಜೀವನದುದ್ದಕ್ಕೂ ಮಾಡಿದ ಹೋರಾಟ ಒಂದು ಭಾಗವಾದರೆ; ಅವರು ಮಾಡಿದ ಚಿಂತನೆಗಳು ಮತ್ತೊಂದು ಭಾಗ. ಜಾತಿ, ಅಸ್ಪೃಶ್ಯತೆ, ಧರ್ಮ, ಲಿಂಗ, ಸಮುದಾಯ, ಅಲ್ಪ ಸಂಖ್ಯಾತರು, ಆರ್ಥಿಕತೆ, ರಾಜಕೀಯ, ಸಮಾಜ, ಭಾಷೆ, ಸಾಹಿತ್ಯ, ಸಂಸ್ಕೃತಿ ಇನ್ನೂ ಮುಂತಾದ ವಿಷಯಗಳಲ್ಲಿ ಅಂಬೇಡ್ಕರ್ ನಡೆಸಿರುವ ಅಧ್ಯಯನಗಳು ಇಂದಿಗೂ ಪ್ರಸ್ತುತ. ಆದರೆ ಅವರನ್ನು ದಲಿತರ ಚಿಂತಕ ಎಂದು ಸೀಮಿತ ಮಾಡಿರುವುದು ಅವರಿಗೆ ಮಾಡಿರುವ ಅವಮಾನವೇ ಸರಿ.

ಊಳಿಗಮಾನ್ಯ ಶೋಷಣೆಯನ್ನು ಕಾಪಾಡುವುದರಲ್ಲೇ ರಾಮರಾಜ್ಯದ ಕನಸು ಕಂಡ ಎಂ.ಕೆ. ಗಾಂಧಿ, ಕಮ್ಯುನಿಸಮ್‌ನ ವಿರುದ್ಧ ಬಂಡವಾಳಶಾಹಿ ಸಮಾಜವಾದದ ಕನಸು ಕಂಡ ನೆಹರು– ಇವರ ನಡುವೆ ಅಂಬೇಡ್ಕರ್ ಈ ದೇಶದ ಅಪಮಾನಿತರ ಹಾಗೂ ಶೋಷಿತರ ವಿಮೋಚನೆಯನ್ನು ಕುರಿತು ಆಲೋಚಿಸಿದ್ದು ಒಂದು ಕ್ರಾಂತಿಕಾರಿ ಹೆಜ್ಜೆ. ಇಡೀ ದೇಶದ ಭೂಮಿ ಮತ್ತು ಸಂಪತ್ತನ್ನು ರಾಷ್ಟ್ರೀಕರಣ ಮಾಡಬೇಕು ಎಂಬುದು ಅಂಬೇಡ್ಕರರ ಮುಖ್ಯ ಗುರಿಯಾಗಿತ್ತು.ಆ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಬಹುದು ಎಂಬುದು ಅವರ ನಿಲುವಾಗಿತ್ತು. ಆದರೆ ಇದಕ್ಕೆ ತದ್ವಿರುದ್ಧವಾಗಿ ಇಡೀ ದೇಶದ ಭೂಮಿ ಮತ್ತು ಸಂಪತ್ತನ್ನು ವಿದೇಶಿ ಲೂಟಿಕೋರರಿಗೆ ತೆರೆದಿಡಲಾಗಿದೆ. ಇದರಿಂದ ಆಳುವ ವರ್ಗಗಳು ಮತ್ತು ಹೊಟ್ಟೆ ತುಂಬಿದ ದಲಿತರು ಒಟ್ಟಾಗಿ ಅಂಬೇಡ್ಕರರ ಆಲೋಚನೆ ಮತ್ತು ಹೋರಾಟಗಳನ್ನು ದಾರಿ ತಪ್ಪಿಸಿದ್ದಾರೆ. ಭೂಮಾಲಿಕರು ಮತ್ತು ವಿದೇಶಿ ಲೂಟಿಕೋರರು ಒಟ್ಟಾಗಿ ತಮ್ಮ ಮೇಲೆ ನಡೆಸುತ್ತಿರುವ ಶೋಷಣೆಯ ವಿರುದ್ಧ ಹೋರಾಡಲು ಹೊಟ್ಟೆ ನಿರ್ಗತಿಕ ದಲಿತರು ಅಂಬೇಡ್ಕರರನ್ನು ಸ್ಫೂರ್ತಿಯಾಗಿ ಸ್ವೀಕರಿಸಬೇಕಿದೆ. ಆಳುವ ವರ್ಗದ ಪರವಾಗಿರುವ ಹೊಟ್ಟೆ ತುಂಬಿದ ದಲಿತರ ಬಗ್ಗೆ ವಿಶೇಷ ಎಚ್ಚರಿಕೆ ವಹಿಸಬೇಕಿದೆ. ಇದು ದಲಿತರು ನಿಜವಾಗಿಯೂ ಅಂಬೇಡ್ಕರರನ್ನು ಗೌರವಿಸುವ ರೀತಿ.

* * *

ವಿಶ್ವಾಮಿತ್ರ

– ವಿನೋಬಾ

ಮನುಷ್ಯನೊಳಗೆ ಕಾಮ ಮನೆ ಮಾಡಿದೆ, ಕ್ರೋಧ ಕೂಡ ಕಾಮದ ರೂಪವೇ. ಕಾಮದಲ್ಲಿ ಕೋಮಲವಾದ ಮನೋವೃತ್ತಿ ಇರುವಂತೆ ತೋರುತ್ತದೆ. ಇದರ ನಿವಾರಣೆಗಾಗಿ ಮನುಷ್ಯ ಕಠೋರ ಮನೋವೃತ್ತಿಯವನಾಗುತ್ತಾನೆ. ಆಗ ಕಾಮವು ಕ್ರೋಧದ ರೂಪ ತಾಳಿ ದಾಳಿ ಮಾಡುತ್ತದೆ. ವಿಶ್ವಾಮಿತ್ರರ ಕ್ರೋಧಾಖ್ಯಾನ ಮತ್ತು ಕಾಮಾಖ್ಯಾನ ಪ್ರಸಿದ್ಧವಿದೆ. ಕ್ರೋಧವನ್ನು ಜಯಿಸುವ ಪ್ರಯತ್ನದಲ್ಲಿ ಕಾಮಿಯಾಗಿ ಬಿಟ್ಟರು. ಹಾಗಾಗಿ ಶಕುಂತಲಾ–ಆಖ್ಯಾನ ಹುಟ್ಟಿಕೊಂಡಿತು. ಕಾಮವನ್ನು ಜಯಿಸುವ ಪ್ರಯತ್ನದಲ್ಲಿ ಕ್ರೋಧಿಗಳಾಗಿ ಬಿಟ್ಟರು. ಹಾಗಾಗಿ ವಶಿಷ್ಟ–ಆಖ್ಯಾನ ಹುಟ್ಟಿಕೊಂಡಿತು. ಅತ್ಯಂತ ತಟಸ್ಥ ವೃತ್ತಿಯಿರಬೇಕು. ಅಲ್ಲಿ ಕೋಮಲತೆಯ ದೋಷವಾಗಲೀ, ಕಠೋರತೆಯ ದೋಷವಾಗಲಿ ಇರಕೂಡದು. ವಿಶ್ವಾಮಿತ್ರ ಋಷಿ ಕಠಿಣ ತಪಸ್ಸಿನ ಮೂಲಕ ಗಾಯತ್ರಿ ಮಂತ್ರವನ್ನು ಪ್ರಾಪ್ತಿಸಿಕೊಂಡರು. ವಿಶ್ವಾಮಿತ್ರರಿಗೆ ಗಾಯತ್ರಿಮಂತ್ರದ ದರ್ಶನವಾಯಿತು. ಆಗ ಅವರು ಒಳ್ಳೆಯ ಬುದ್ಧಿಯನ್ನು ಕೊಡಬೇಕೆಂದು ದೇವರಲ್ಲಿ ಪ್ರಾರ್ಥಿಸಿಕೊಂಡರು. ವಿಶ್ವಾಮಿತ್ರರು ತಮ್ಮ ವರ್ಣನೆ ಮಾಡಿಕೊಂಡಿದ್ದಾರೆ–**ಅಗ್ನಿರಶ್ಮಿ ಜನ್ಮನಾ ಜಾತ ವೇದಾಃ ಘೃತಂ ಮೇ ಚಕ್ಷುರಮೃತಮ್ ಮಾ ಆಸನ್** (೩.೨೬.೮) ನಾನು ಜನ್ಮದಿಂದಲೆ ಅಗ್ನಿಯಾಗಿ ಜನಿಸಿದೆ. ನನ್ನ ಕಣ್ಣುಗಳಲ್ಲಿ ತುಪ್ಪವಿದೆ ಮತ್ತು ಬಾಯಿಯಲ್ಲಿ ಮಧುವಿದೆ. ಪ್ರಾಚೀನ ಕಾಲದಲ್ಲಿ ಅಗ್ನಿಗೆ ತುಪ್ಪ ಮತ್ತು ಮಧುವಿನ ಆಹುತಿ ಕೊಡುತ್ತಿದ್ದರು. ತುಪ್ಪವೆಂದರೆ ಪವಿತ್ರತೆ, ಸ್ನಿಗ್ಧತೆ, ನಿರ್ಮಲತೆ. ಕಣ್ಣುಗಳು ಪವಿತ್ರವಾಗಿರಲಿ ಮತ್ತು ನಾಲಿಗೆಯಲ್ಲಿ ಮಧುವಿರಲಿ.

ಜ್ಞಾನದೇವ ಮಹಾರಾಜರು ಮರಾಠಿಯಲ್ಲಿ ಹೀಗೆ ಬರೆದಿದ್ದಾರೆ, (**ಮಾಝಿಯ ಸತ್ಯವಾದಾಚೆ ತಪ್ ವಾಚ ಕೇಲೆ ಬಹುತ್ ಕಲ್ಪ್. ತಯಾ ಫಳಾಚೆ ಹೇ ಮಹಾದ್ವೀಪ್. ಪಾತಾಲಿ ಪ್ರಭು** (೧೬.೩೨) ಈ ಗೀತೆಯ ಭಾಷ್ಯ ಬರೆಯುವ ಭಾಗ್ಯ ನನಗೆ ದೊರೆತಿದೆ. ನಾನು ಈ ಜನ್ಮದಲ್ಲಿ ಸುಳ್ಳು ಹೇಳಿಲ್ಲ ಎಂದು ಹೇಳುವ ಮನುಷ್ಯ ಬಹುಷಃ ಅಪರೂಪವಾಗಿ ದೊರೆಯಬಹುದು. ಹಾಗಿರುವಾಗ ಅನೇಕ ಜನ್ಮಗಳವರೆಗೆ ಸತ್ಯವನ್ನೆ ಮಾತನಾಡಿದಂಥ ಜ್ಞಾನದೇವರಂಥ ಮನುಷ್ಯ ಎಲ್ಲಿ ದೊರೆಯುತ್ತಾನೆ?

ಇಂಥದೆ ವಾಕ್ಯ ವಿಶ್ವಾಮಿತ್ರರು ಹೇಳಿರುವಂಥದು ವೇದದಲ್ಲಿ ದೊರೆಯುತ್ತದೆ. **ಜನ್ಮನ್ ಜನ್ಮನ್ ನಿಹಿತೊ ಜಾತವೇದಾಃ** (೩.೧.೨೨) ನಾನು ಅನೇಕ ಜನ್ಮಗಳಲ್ಲಿ ಅಗ್ನಿಯ ಉಪಾಸನೆ ಮಾಡಿದ್ದೇನೆ. ಆದ್ದರಿಂದ ವಿಶ್ವಾಮಿತ್ರನಾದ ನಾನು ಅಗ್ನಿರೂಪನಾಗಿದ್ದೇನೆ. **ವಿಶ್ವಾಮಿತ್ರೆ ಭಿ ರಿದ್ಧ್ಯತೆ ಅಜಸ್ರಹಃ** ಅನೇಕ ವಿಶ್ವಾಮಿತ್ರರು ಅಗ್ನಿಯ ಉಪಾಸನೆ ಮಾಡಿದರು. ಇದರ ಅರ್ಥ ವಿಶ್ವಾಮಿತ್ರರು ಅನೇಕ ಜನ್ಮಗಳಲ್ಲಿ ಅಗ್ನಿಯ ಉಪಾಸನೆ ಮಾಡಿದರು. ಆದ್ದರಿಂದ ಈ ಜನ್ಮದಲ್ಲಿ ಅವರಿಗೆ ದರ್ಶನವಾಯಿತು, **ತತ್ ಸವಿತುರ್ ವರೇಣ್ಯಮ್** (೩.೬೨.೭) ಗಾಯತ್ರಿ ಮಂತ್ರದ ದರ್ಶನ!

ವಿಶ್ವಾಮಿತ್ರರು ನದಿಯೊಂದಿಗೆ ನಡೆಸಿದ ಸಂವಾದ ನದಿಸೂಕ್ತ ತುಂಬಾ ಪ್ರಸಿದ್ಧವಾಗಿದೆ. ಅಂದರೆ ಸಟ್ಲೆಜ್ ಮತ್ತು ವ್ಯಾಸ ನದಿಗಳ ಸಂಗಮದೊಂದಿಗೆ ವಿಶ್ವಾಮಿತ್ರರ

ವಾರ್ತಾಲಾಪವಾಗಿತ್ತು. ಅದರ ಒಂದು ಸ್ವತಂತ್ರ ಸೂಕ್ತ ವೇದದಲ್ಲಿದೆ. ವಿಶ್ವಾಮಿತ್ರರು ಭಾರತೀಯರನ್ನು ಕರೆದುಕೊಂಡು ನದಿಯನ್ನು ದಾಟಬಯಸುತ್ತಾರೆ. ನದಿಯಲ್ಲಿ ಪ್ರವಾಹ ಬರುತ್ತದೆ. ಆದ್ದರಿಂದ ಋಷಿ ನದಿಯೊಂದಿಗೆ ಹೀಗೆ ಪ್ರಾರ್ಥನೆ ಮಾಡುತ್ತಾರೆ, "ಹೇ ನನ್ನ ಮಾತೆಯೆ, ನೀನು ನನಗೋಸ್ಕರ ನಿಂತುಬಿಡು ಮತ್ತು ನನಗೆ ದಾರಿ ಕೊಡು." ಆಗ ನದಿ ಉತ್ತರ ಕೊಡುತ್ತದೆ," ಯಾವ ರೀತಿ ತಾಯಿಯು ಮಗುವಿಗಾಗಿ ಬಾಗುತ್ತಾಳೊ ಅಥವಾ ಮಗಳು ತಂದೆಯ ಸೇವೆಗಾಗಿ ಬಾಗುತ್ತಾಳೊ ಹಾಗೆ ನಾನು ನಿನಗಾಗಿ ಬಾಗುತ್ತೇನೆ." **ನಿತೆ ನಮ್ ಸೈ ಪೀಪ್ಯಾನೆವಾ ಯೋಷಾ ಮರ್ಯಾಯೇವ ಕನ್ಯಾ ಷಷ್‌ವಚೈತೆ** (೨.೨.೧೨) ಹೀಗೆ ಹೇಳಿ ನದಿ ಬಾಗಿತು ಮತ್ತು ವಿಶ್ವಾಮಿತ್ರರು ದಾಟಿ ಹೋದರು.

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು – 'ಸದಾಶಿವ ನಾಟಕ ದರ್ಶನ'
ಲೇಖಕರು – ದತ್ತಾತ್ರೇಯ ಗರುಡ
ಪ್ರಕಾಶಕರು – ದತ್ತಾತ್ರೇಯ ಗರುಡ
೭೮/೨, ಸಂಗೀತ ಕಲಾಭವನ
೬ನೇ ಕ್ರಾಸ್, ಮಲ್ಲೇಶ್ವರ,
ಬೆಂಗಳೂರು ೫೬೦೦೦೩.
ಬೆಲೆ – ೧೫೦-೦೦
ಪುಟಗಳು – ೧೨೮

ಕರ್ನಾಟಕದ ರಂಗಭೂಮಿ ಕ್ಷೇತ್ರದಲ್ಲಿ ಧ್ರುವತಾರೆಯಂತಿದ್ದ ರಂಗಭೂಮಿ ಕಲಾವಿದ ಶ್ರೀ ಗರುಡ ಸದಾಶಿವರಾಯರು. ಅವರ ಬಗ್ಗೆ ಅವರ ಹಿರಿಯ ಸುಪುತ್ರ ದತ್ತಾತ್ರೇಯ ಗರುಡರು ಕನ್ನಡಿಗರ ಮುಂದೆ ತಮ್ಮ ತಂದೆಯವರು ರಂಗಭೂಮಿ ಕ್ಷೇತ್ರದಲ್ಲಿ ಅನುಭವಿಸಿದ ಕಷ್ಟ ಸುಖಗಳನ್ನು ಮನ ಮುಟ್ಟುವಂತೆ ಬರೆದಿದ್ದಾರೆ. ಹೊಸ ತಲೆಮಾರಿನ ರಂಗ ಪ್ರೇಮಿಗಳು ಈ ಪುಸ್ತಕವನ್ನು ಓದಿದಾಗ ೨೦ ನೇ ಶತಮಾನದ ಮೊದಲ ಭಾಗದಲ್ಲಿದ್ದ ಕನ್ನಡ ನಾಟಕ ಕಂಪನಿಗಳು ಬೆಳೆದು ಬಂದ ದಾರಿಯನ್ನು ತೋರಿಸುತ್ತದೆ.

ಚೆನ್ನೈ ಮೇಲೆ ಅಣುಬಾಂಬಿನ ಪರಿಣಾಮ

– ಅಣ್ವಸ್ತ್ರ ವಿರೋಧಿ ವಿಜ್ಞಾನಿಗಳು.

ಬಹಳಷ್ಟು ಅಣುಬಾಂಬುಗಳು ರಣನೀತಿಯ ಬಾಂಬುಗಳಾಗಿವೆ. ನಾಗರಿಕ ಸಮುದಾಯದ ನಾಶಕ್ಕಾಗಿಯೆ ಅವುಗಳನ್ನು ಉಪಯೋಗಿಸುವ ಸಾಧನಗಳಾಗಿವೆ. ಚೆನ್ನೈ ನಗರದ ಮೇಲೆ ಒಂದು ಚಿಕ್ಕ ಅಣುಬಾಂಬ್ ಬಿದ್ದರೆ ಏನೆಲ್ಲ ಸಂಭವಿಸಬಹುದು? ಆ ಬಾಂಬ್ ಹಿರೋಷಿಮಾ ನಗರವನ್ನು ನಾಶ ಮಾಡಿದಂಥ ೧೫ ಕಿಲೊ ಟನ್ಸ್ ಟಿ.ಎನ್.ಟಿ ಯನ್ನು ಬಿಡುಗಡೆ ಮಾಡುವ ಸಾಮರ್ಥ್ಯ ಹೊಂದಿದೆ ಎಂಬ ಕಲ್ಪನೆ ಮಾಡಿಕೊಳ್ಳಿ. ಚೆನ್ನೈ ನಗರದ ತ್ಯಾಗರಾಜನಗರದ ಪಾಂಡಿ ಬಜಾರ್ ಪ್ರದೇಶದಲ್ಲಿ ಒಂದು ದಿನ ಬೆಳಗಿನ ಜಾವ ಎಂಟು ಗಂಟೆಯ ಸುಮಾರಿಗೆ ೧೫ ಕಿಲೊ ಟನ್ ಅಣುಬಾಂಬನ್ನು ಎಸೆಯಲಾಯಿತೆಂದು ಊಹಿಸಿಕೊಳ್ಳಿ. ಈ ಪ್ರದೇಶ ದಿನದ ಬಹಳಷ್ಟು ಸಮಯ ವಿವಿಧ ಬಗೆಯ ಗ್ರಾಹಕರಿಂದ ತುಂಬಿರುತ್ತದೆ. ಇದು ಬಾಂಬ್ ಬಿದ್ದ ಸ್ಥಳ. ಮೂರು ಮೈಕ್ರೊ ಸೆಕೆಂಡ್ಸ್‌ಗಳಲ್ಲಿ ಆ ಪ್ಲುಟೋನಿಯಂ ಬಾಂಬಿನಲ್ಲಿ ಪ್ರತಿಕ್ರಿಯೆಯ ಸರಮಾಲೆಯೆ ಪ್ರಾರಂಭವಾಗುತ್ತದೆ. ಮಗದೊಂದು ಮೈಕ್ರೊ ಸೆಕೆಂಡಿನಲ್ಲಿ ಆ ಬಾಂಬ್ ಆವಿಯಾಗಿ ಬಿಡುತ್ತದೆ. ಅದರ ಶಕ್ತಿ ನಗರವನ್ನು ಧ್ವಂಸ ಮಾಡಲು ಬಿಡುಗಡೆಗೊಳ್ಳುತ್ತದೆ. ಬಾಂಬ್ ಬಿದ್ದ ನಾಲ್ಕು ಮೈಕ್ರೊ ಸೆಕೆಂಡ್ಸ್‌ಗಳಲ್ಲಿ ಮಿಂಚಿನಂಥ ಪ್ರಕಾಶವೊಂದು ಉಂಟಾಗಿ ಅದು ಸುತ್ತಲಿನ ಹತ್ತಿರದ ಸ್ಥಳದಲ್ಲಿರುವ ಪ್ರತಿಯೊಂದನ್ನೂ ಆವಿಯನ್ನಾಗಿ ಪರಿವರ್ತಿಸುತ್ತದೆ. ಮಾರುಕಟ್ಟೆಯ ಸಂಕೀರ್ಣದಲ್ಲಿರುವ ಸಾವಿರಾರು ಗ್ರಾಹಕರು ಆ ಸ್ಫೋಟವನ್ನು ನೋಡುವ ಮೊದಲೆ ಸತ್ತು ಹೋಗಿರುತ್ತಾರೆ. ಅಲ್ಲಿ ಸಂಚರಿಸುತ್ತಿರುವ ವಾಹನಗಳ ಲೋಹಗಳು, ಮೇಲ್ಭಾಗದ ವಿದ್ಯುತ್ ತಂತಿಗಳು ಮತ್ತು ಅನೇಕ ಅಂಗಡಿಗಳಲ್ಲಿಯ ಪದಾರ್ಥಗಳ ಸಂಗ್ರಹವು ಶಾಖದಲ್ಲಿ ಕರಗಿ ಹೋಗಿರುತ್ತವೆ. ಈ ಶಾಖ ಎಷ್ಟು ಪ್ರಖರವಾಗಿರುತ್ತದೆಂದರೆ ಅಲ್ಲೆಲ್ಲೂ ಕೊಚ್ಚೆ ನೀರಿನ ಗುಂಡಿಗಳಾಗಲು ಸಹ ಸಮಯವಿರುವುದಿಲ್ಲ. ಈ ಮಿಂಚನ್ನು ಹಿಂಬಾಲಿಸಿ ಭಯಂಕರವಾದ ಸ್ಫೋಟಕ ಸದ್ದು ಬರುತ್ತದೆ. ಈ ಸದ್ದಿನ ಪ್ರಖರತೆ ನಾವು ಕೇಳಬಹುದಾದ ಯಾವುದೇ ಸದ್ದಿಗಿಂತ ಅನೇಕ ಪಟ್ಟು ವೇಗಗತಿಯದಾಗಿರುತ್ತದೆ. ಇದನ್ನೆ ಸ್ಫೋಟಕ ಅಲೆಯೆಂದು ಕರೆಯಲಾಗುತ್ತದೆ ಮತ್ತು ಇದು ಬಹಳಷ್ಟು ಹಾನಿಗೆ ಕಾರಣವಾಗುತ್ತದೆ. ಈ ಧ್ವನಿ ಕರಗಿಹೋದ ಲೋಹಗಳನ್ನು ಬದಿಗೊತ್ತಿ ತನ್ನ ಪಥದಲ್ಲಿ ಬರುವ ಪ್ರತಿಯೊಂದನ್ನೂ ಹೊಡೆದು ಹಾಕುತ್ತಾ ಮುನ್ನುಗ್ಗುತ್ತದೆ. ಈ ಭೀಕರ ಧ್ವನಿಯ ಕಾರಣದಿಂದಾಗಿಯೇ ಮಾನವ ಶರೀರವು ಛಿದ್ರಗೊಳ್ಳುತ್ತದೆ. ನೆಲದಿಂದ ಸುಮಾರು ಮುನ್ನೂರು ಮೀಟರ್‌ಗಳವರೆಗೆ ಈ ಮಿಂಚಿನ ಬೆಳಕನ್ನು ನೋಡಬಹುದು ಮತ್ತು ನಾಯಿಕೊಡೆಯಂಥ ಹೊಗೆಯ ಮೋಡ ಪ್ರಾರಂಭವಾಗುವುದನ್ನು ಕಾಣಬಹುದು. ಆದರೆ ಜನರು ಬಾಂಬ್ ಸ್ಫೋಟಗೊಳ್ಳುವ ಮೊದಲೆ ಸತ್ತು ಹೋಗಿರುತ್ತಾರೆ. ಸುಮಾರು ಐದು ಸಾವಿರ ಜನ ಬಾಂಬ್ ಬಿದ್ದ ಒತ್ತಡದ ಪ್ರದೇಶವಾದ ಪಾಂಡಿ ಬಜಾರ್‌ನಲ್ಲಿ ಇದ್ದಾರೆ ಮತ್ತು ಕೆಲಸ ಮಾಡುತ್ತಾರೆ. ಈ ಎಲ್ಲ ಜನರಿಗೆ ಸಾವು ಖಚಿತ. ಓಡಿ ಹೋಗಲೂ

ಸ್ಥಳವಿಲ್ಲ ಅವಿತುಕೊಳ್ಳಲೂ ಸ್ಥಳವಿಲ್ಲ. ಬಾಂಬ್ ಬಿದ್ದ ಅರ್ಧ ಕ್ಷಣದೊಳಗಾಗಿ ಹತ್ತು ಸಾವಿರ ಜನ ಸಾಯುತ್ತಾರೆ. ಮತ್ತು ನಾಯಿಕೊಡೆಯ ರೂಪದಲ್ಲಿರುವ ರೇಡಿಯೊ ವಿಕಿರಣಗಳ ಮೋಡ ಪಾಂಡಿ ಬಜಾರಿನ ಮೇಲೆಲ್ಲ ಎದ್ದೇಳುತ್ತದೆ. ಬೆಂಕಿಯಚೆಂಡು ಹಬ್ಬಿದ ಮಿಲಿ ಸೆಕೆಂಡ್ಸ್‌ಗಳಲ್ಲಿ ಇಲೆಕ್ಟ್ರೊ ಮ್ಯಾಗ್ನಟಿಕ್ ಮಿಡಿತ ಬಹು ದೊಡ್ಡ ಪ್ರದೇಶದಲ್ಲಿಯ ವಿದ್ಯುನ್ಮಾನ ಯಂತ್ರಗಳೆಲ್ಲವನ್ನೂ ಹುರಿದು ಹಾಕಿಬಿಟ್ಟಿರುತ್ತದೆ. ಸಿಂಗಾರ ಚೆನ್ನೈ ಸಾಯಲು ಪ್ರಾರಂಭಿಸಿರುತ್ತದೆ.

ಒಂದೂವರೆ ಕಿಲೋ ಮೀಟರ್‌ನಷ್ಟು ದೂರದವರೆಗೆ ಸ್ಫೋಟದ ಪ್ರಭಾವ ಉಂಟಾಗಿರುತ್ತದೆ. ಅದರ ಪರಿಣಾಮವಾಗಿ ಇಟ್ಟಿಗೆಯ ಕಟ್ಟಡಗಳು ನಾಶಗೊಂಡಿರುತ್ತವೆ ಜನರನ್ನು ಮತ್ತು ಪದಾರ್ಥಗಳನ್ನು ಆಕಾಶದಲ್ಲಿ ಎರಚಿರುತ್ತದೆ. ಮನೆಗಳನ್ನು, ಕಟ್ಟಡಗಳನ್ನು ಬೀಳಿಸುತ್ತಾ ಜನರನ್ನು ಸಾಯಿಸಿರುತ್ತದೆ. ಸ್ಫೋಟವು ಧ್ವನಿಯ ವೇಗಕ್ಕಿಂತ ಹೆಚ್ಚು ವೇಗದಲ್ಲಿ ಧಾವಿಸುತ್ತದೆ. ಆದ್ದರಿಂದ ಯಾವ ಮನುಷ್ಯನೂ ಅದಕ್ಕಿಂತ ಹೆಚ್ಚು ವೇಗವಾಗಿ ಓಡಲು ಸಾಧ್ಯವಿಲ್ಲ. ಈ ಪ್ರದೇಶದಲ್ಲಿಯ ಸುಮಾರು ಒಂದು ಲಕ್ಷ ಜನರು ಇದರ ಪರಿಣಾಮಕ್ಕೆ ಒಳಗಾಗಿರುತ್ತಾರೆ. ಅವರಲ್ಲಿ ಹತ್ತಕ್ಕೆ ಒಬ್ಬ ಅಥವಾ ಇನ್ನೂ ಹೆಚ್ಚು ಜನ ತಕ್ಷಣವೆ ಸಾಯುತ್ತಾರೆ. ಬದುಕುಳಿದವರು ಅತ್ಯಂತ ತೀವ್ರವಾಗಿ ಗಾಯಗೊಂಡವರಾಗಿರುತ್ತಾರೆ. ಐದು ಕ್ಷಣಗಳೊಳಗಾಗಿ ೨೦ ಸಾವಿರ ಜನ ಸತ್ತಿರುತ್ತಾರೆ ಮತ್ತು ಒಂದು ಲಕ್ಷಕ್ಕಿಂತ ಹೆಚ್ಚು ಜನ ಗಾಯಗೊಂಡವರಾಗಿರುತ್ತಾರೆ.

ಇದಾದ ನಂತರ ಸ್ಫೋಟವು ಬಿರುಗಾಳಿಯ ವೇಗಕ್ಕೆ ಇಳಿಮುಖಗೊಳ್ಳುತ್ತದೆ. ಪಾಂಡಿ ಬಜಾರ್‌ನಿಂದ ಮೂರು ಕಿಲೊಮೀಟರ್‌ವರೆಗೆ ಇರುವ ಎಲ್ಲ ಮನೆಗಳನ್ನು ಮತ್ತು ಪದಾರ್ಥಗಳನ್ನು ನಾಶಮಾಡಿರುತ್ತದೆ. ಅಂದರೆ ಮಾಂಬಲಮ್, ವಾಣಿಮಹಲ್ ಮತ್ತು ಅಡಯರ್ ಈ ಎಲ್ಲ ಪ್ರದೇಶ ನಾಶಕ್ಕೆ ಒಳಗಾಗುತ್ತದೆ. ಹಾಗಾಗಿ ಇನ್ನೂ ಮೂರುಲಕ್ಷ ಜನರು ದುರಂತಕ್ಕೆ ಒಳಗಾಗುತ್ತಾರೆ. ಶೇ ಒಂದರಷ್ಟು ಜನ ಸಾಯುತ್ತಾರೆ. ಸ್ಫೋಟದ ಒಂಭತ್ತು ಕ್ಷಣಗಳ ನಂತರ ಸುಮಾರು ೨೩ ಸಾವಿರ ಜನ ಸತ್ತಿರುತ್ತಾರೆ ಮತ್ತು ಮೂರು ಲಕ್ಷ ಜನರು ಸಹಾಯಕ್ಕಾಗಿ ಹಾತೊರೆಯುತ್ತಾರೆ. ನಗರದ ತುಂಬಾ ಚಟುವಟಿಕೆಯ ವಾಣಿಜ್ಯ ಸ್ಥಳ ಕಲ್ಲು ಮಣ್ಣುಗಳಿಂದ ಕೂಡಿದ ವಿಶಾಲ ಪ್ರದೇಶವಾಗಿ ಪರಿವರ್ತಿತವಾಗಿರುತ್ತದೆ. ಅಡ್ಯೈಯರ್, ವಸಂತನಗರ, ತಿರುವಣ್‌ಮೆಯರ್‌ನಂಥ ಪ್ರದೇಶ ಒಂದು ಕಡೆಗೆ ಮತ್ತು ಅಶೋಕನಗರ, ಕೆ.ಕೆ.ನಗರ, ಅಣ್ಣಾನಗರ ಮತ್ತೊಂದು ಕಡೆಗೆ ಮತ್ತು ಅಷ್ಟೇ ಪ್ರದೇಶ ಎಲ್ಲ ದಿಕ್ಕುಗಳಲ್ಲಿ ಸ್ಮಶಾನಸದೃಶವಾಗಿರುತ್ತದೆ. ನಗರದ ವಿವಿಧ ಭಾಗಗಳಲ್ಲಿಯ ಸಂಪರ್ಕವೆಲ್ಲ ಮುರಿದು ಬಿದ್ದು ಹೋಗಿರುತ್ತದೆ. ಎಲೆಕ್ಟ್ರೋ ಮ್ಯಾಗ್ನೆಟಿಕ್ ಸ್ಪಂದನದ ಕಾರಣದಿಂದಾಗಿ ಸಂವಾಹಕ ಉಪಕರಣಗಳೆಲ್ಲ ನಿಸ್ಪ್ರಯೋಜಕವಾಗುತ್ತವೆ. ನಾಯಿಕೊಡೆಯಂಥ ಮೋಡ ಮುಂದಿನ ದಿನಗಳಲ್ಲಿ ಅಣು ವಿಷವನ್ನು ಒಳಗಿನ ಭೂ ಪ್ರದೇಶದಲ್ಲೆಲ್ಲ ಬಿತ್ತಿರುತ್ತದೆ. ಅಲ್ಲದೆ ವಿಕಿರಣದ ಧೂಳು ತಿರುವಲ್ಲೂರ್ ಮತ್ತು ಕಾಂಚಿಪುರಂ ಜಿಲ್ಲೆಗಳವರೆಗಷ್ಟೆ ಅಲ್ಲದೆ ಮಾಮಲ್ಲಪುರಂ ದವರೆಗಿನ ದೂರದಷ್ಟು ಪ್ರದೇಶದಲ್ಲಿ ಉದುರುತ್ತದೆ.

ಅದಕ್ಕಿಂತ ಮುನ್ನ ಒಂದು ನಿಮಿಷದೊಳಗಾಗಿ ಚೆನ್ನೈನಿಂದ ಹೊರಡುವ ಎಲ್ಲ ಸಂಪರ್ಕಗಳು ನಿಂತು ಹೋಗಿವೆಯೆಂದು ಜಗತ್ತಿಗೆ ಗೊತ್ತಾಗುತ್ತದೆ. ದುರಂತಕ್ಕೊಳಗಾದ

ನಗರದ ಸಹಾಯಕ್ಕಾಗಿ ಇಡೀ ದೇಶವು ದೊಡ್ಡ ಪ್ರಮಾಣದ ಪ್ರಯತ್ನದಲ್ಲಿ ತೊಡಗಬೇಕಾಗುತ್ತದೆ. ಮುಖ್ಯ ರಸ್ತೆಗಳನ್ನು ಮತ್ತು ರೈಲು ಸಂಪರ್ಕಗಳನ್ನು ಸರಿಮಾಡುವುದಕ್ಕೆ ವ್ಯಾಪಕವಾದ ತಾಂತ್ರಿಕ ಸೇವೆಗಳ ಅಗತ್ಯ ಉಂಟಾಗುತ್ತದೆ. ಇಲ್ಲಿ ಜ್ಞಾಪಕವಿಟ್ಟುಕೊಳ್ಳಬೇಕಾದ ಸಂಗತಿಯೇನೆಂದರೆ ಗಾಯಗೊಂಡ ಲಕ್ಷಾಂತರ ಜನರು ಬಿದ್ದ ಪದಾರ್ಥಗಳ ಅಡಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಅವರಿಗೆ ಕೂಡಲೆ ನೆರವು ಸಿಗದಿದ್ದರೆ ಅವರು ಸತ್ತು ಹೋಗುವರು. ಅನೇಕ ಕುಟುಂಬಗಳ ಮುಖ್ಯಸ್ಥರು ಸಂಪಾದನೆಗಾಗಿ ತಮ್ಮ ಕುಟುಂಬಗಳನ್ನು ಬಿಟ್ಟು ದೂರ ಹೋಗಿದ್ದಾರೆ. ಸಂಪರ್ಕ ಮಾಧ್ಯಮಗಳನ್ನು ಕೂಡಲೆ ಸರಿಪಡಿಸಬೇಕು. ಬದುಕಿದವರ ಮತ್ತು ಸತ್ತು ಹೋದವರ ಪಟ್ಟಿಯನ್ನ ಮಾಡಬೇಕು. ಈ ವಿಚಾರವನ್ನು ಬದುಕುಳಿದ ಜನರಿಗೆ ತಿಳಿಸಿ ಹೇಳಬೇಕು. ಇಲ್ಲದೆ ಹೋದರೆ ಇನ್ನಷ್ಟು ಗಾಬರಿ ದೊಂಬಿಗಳಿಗೆ ಕಾರಣವಾಗುತ್ತದೆ.

ರಸ್ತೆಗಳನ್ನು ದುರಸ್ತಿ ಮಾಡದೆ ಆಹಾರವನ್ನು ಸಾಗಿಸಲು ಸಾಧ್ಯವಾಗದೆ ಇರುವಂಥ ಸ್ಥಳದಲ್ಲಿ ನಗರದ ಜನಸಂಖ್ಯೆಯ ಬಹಳಷ್ಟು ಜನರು ಸಿಕ್ಕಿಬಿದ್ದಿರುತ್ತಾರೆ. ಈ ಎಲ್ಲ ವಿಷಯಗಳ ಬಗ್ಗೆ ನಾವು ಆಲೋಚಿಸಬೇಕು. ಇಂಥವೆ ಇನ್ನೂ ಅನೇಕ ಪ್ರಶ್ನೆಗಳಿವೆ. ನಾವು ಭಯಾನಕವಾದ ಅಸ್ತ್ರವನ್ನು ಕೈಯಲ್ಲಿ ಹಿಡಿದಿದ್ದೇವೆ. ನಾವು ಮೃತ್ಯುವಿನ ಮುಖವನ್ನು ನೋಡಬೇಕು. ಮತ್ತು ಮೃತ್ಯುವಿನ ಅನಂತರವೂ ನಾವು ಬದುಕುವ ಯೋಜನೆಗಳನ್ನು ಮಾಡಬೇಕು.

ಶತ್ರುವಿನ ಬಾಂಬ್ ಲಕ್ಷಾಂತರ ಜನರನ್ನು ಸಾಯಿಸಿರಬಹುದು. ಇನ್ನೂ ಲಕ್ಷಾಂತರ ಜನರನ್ನು ಗಾಯಗೊಳಿಸಿರಬಹುದು. ಚೆನ್ನೈ ನಗರದ ಸಾವಿನ ಸೇಡನ್ನು ನಮ್ಮ ಬಾಂಬ್‌ಗಳನ್ನು ಉಪಯೋಗಿಸುವಂಥವರು ತೀರಿಸಿಕೊಳ್ಳಬಹುದು. ಆದರೆ ಚೆನ್ನೈಯ ಐವತ್ತು ಲಕ್ಷ ನಿವಾಸಿಗಳು ಒಟ್ಟು ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ವಿಕಿರಣದಿಂದಾಗುವ ನಿಧಾನ ಸಾವು, ವಿಷ ಮಿಶ್ರಣ, ಹಸಿವಿನಿಂದ ನರಳುವಿಕೆ ಮತ್ತು ಕ್ಯಾನ್ಸರಿನ ಹಬ್ಬುವಿಕೆ, ಅಂಗವಿಕಲ ಮಕ್ಕಳ ಜನನ ಮತ್ತು ಚಂಗಲ್‌ಪಟ್ಟು, ಗುಮುಡಿಪುಂಡಿ, ಮಲ್ಲಪುರಂ ಪ್ರದೇಶಗಳೆಲ್ಲ ಹಾಗೂ ದಕ್ಷಿಣದ ತೀರದ ಮರಳನ್ನು ಒದ್ದೆಮಾಡುವ ಸಮುದ್ರದ ನೀರು ಎಲ್ಲವೂ ವಿಷಮಯವಾಗುತ್ತದೆ.

ಕೊನೆಯದಾಗಿ ಇಂಥ ವ್ಯಾಪಕ ದುರಂತ ಸಂಭವಿಸುವುದಿಲ್ಲ ಎಂದು ನಾವು ಖಚಿತಪಡಿಸಿಕೊಳ್ಳಬೇಕು. ಭೌತಶಾಸ್ತ್ರದ ನಿಯಮಗಳು ಮಾನವರ ಹಿತ ಚಿಂತನೆ ಮಾಡುವುದಿಲ್ಲ. ಆ ನಿಯಮಗಳು ನಿರ್ಜೀವ ಪದಾರ್ಥ ಮತ್ತು ಶಕ್ತಿಯ ಬಗ್ಗೆ ಯೋಚನೆ ಮಾಡುತ್ತದೆ. ಪ್ರಕೃತಿಯ ನಿಯಮಗಳನ್ನು ಅಧೀನಪಡಿಸಿಕೊಂಡಿದ್ದೇವೆಂಬ ನಮ್ಮ ಸಂಭ್ರಮದ ಆಚೆಗೆ ಹೋಗಬೇಕಾದ ಸಮಯ ಬಂದಿದೆ. ಜಗತ್ತಿನ ದೇಶಗಳನ್ನು ಮಾನವೀಯ ಗುಣಧರ್ಮಗಳುಳ್ಳ ನಿಯಮಗಳನ್ನು ಕಟ್ಟುವಂಥ ಕಠಿಣತಮ ಹೋರಾಟದಲ್ಲಿ ತೊಡಗಬೇಕಾದಂಥ ಸಮಯ ಬಂದಿದೆ. *– ಅನು : ಸುಕೌ*

* * *

ನಾನು ಮತ್ತು ನನ್ನ ಮತಾಧಿಕಾರ ಒಂದು ಚಿಂತನೆ

– ಸತ್ಯವ್ರತ

ನನ್ನ ಮತ ಬಹು ಪವಿತ್ರ ಮತ್ತು ಅಮೋಘವಾದುದು. ಅದು ಯಾವ ಕಾರಣಕ್ಕೂ ವ್ಯರ್ಥವಾಗಬಾರದು.ನನ್ನ ಮತಾಧಿಕಾರದ ಚಲಾವಣೆ ಬಹು ವಿಚಕ್ಷಣೆ ಮತ್ತು ವಿವೇಕಯುತವಾಗಿ ಆಗುವಂತೆ ನೋಡಿಕೊಳ್ಳಬೇಕಾದುದು ನನ್ನ ಪರಮ ಪವಿತ್ರ ಕರ್ತವ್ಯ. ಆದ್ದರಿಂದ ಅದನ್ನು ಚಲಾಯಿಸುವಾಗ ಎಲ್ಲ ಎಚ್ಚರಿಕೆ ಮತ್ತು ಪರಿಣಾಮಗಳು ಅರಿವು ನನಗಿರಬೇಕು. ಮತಾಧಿಕಾರದಲ್ಲಿ ಕನಿಷ್ಠ ಮೂರು ಪ್ರಕ್ರಿಯೆಗಳು ಸಮ್ಮಿಳಿತವಾಗಿವೆ. ಆ ಮೂರೂ ಒಟ್ಟುಗೂಡಿ 'ಮತ' ಎನಿಸಿಕೊಳ್ಳುತ್ತದೆ. ಯೋಗ್ಯ ಉಮೇದುವಾರನ ಆಯ್ಕೆ; ಇಂಥ ಉಮೇದುವಾರ ನನ್ನ ವಿಚಾರದಲ್ಲಿ ನನ್ನ ಪ್ರತಿನಿಧಿಯಾಗಲು ಯೋಗ್ಯನೆಂಬ ನನ್ನ ನಿರ್ಣಯ ಮತ್ತು ಆತ ನನ್ನ ಪ್ರತಿನಿಧಿಯೆಂದು ನನ್ನಿಂದ ನಿಯುಕ್ತಿ ಹೀಗೆ ಏಕಕಾಲದಲ್ಲಿ ಪ್ರತಿನಿಧಿಯ ಬಗ್ಗೆ ನನ್ನ ನಿರ್ಣಯ, ಆಯ್ಕೆ ಮತ್ತು ನಿಯುಕ್ತಿ ಈ ಮೂರು ಪ್ರಕ್ರಿಯೆಗಳು ಅಡಗಿವೆ. ಮತ ಚಲಾವಣೆ ಎಂದರೆ ಈ ಮೂರೂ ಪ್ರಕ್ರಿಯೆಗಳನ್ನು ನಾನು ನಿರ್ವಹಿಸಿ, ಯಶಸ್ವಿಯಾಗಿ ಪೂರೈಸಿದೆ ಎಂದಾಯಿತು. ಎಲ್ಲ ಎಚ್ಚರಿಕೆ ಮತ್ತು ಜವಾಬ್ದಾರಿಯಿಂದ ಮತಾಧಿಕಾರ ಚಲಾಯಿಸಿದಾಗಲೇ 'ಮತ ಹಾಕಿದೆ' ಎನ್ನುವುದು ಅನ್ವರ್ಥವಾಗುವುದು.

ಭ್ರಷ್ಟಾಚಾರ ಮತ್ತು ಪ್ರಲೋಭನೆಗಳಿಗೆ ವಶನಾಗಿ ಮತಹಾಕುವುದೆಂದರೆ ಈ ಎಲ್ಲ ಬಗೆಯ ದುಷ್ಟ ಕಟ್ಟುಪಾಡುಗಳಿಗೊಳಪಟ್ಟು ನನ್ನ ಮತಾಧಿಕಾರವನ್ನು ನಾನೇ ಮೊಟಕು ಮಾಡಿಕೊಂಡಂತೆ. ಈ ಎಲ್ಲ ಕಾರಣಗಳಿಂದ ನನ್ನ ಮತ ಭ್ರಷ್ಟವಾಯಿತು. ಯಥಾರ್ಥದಲ್ಲಿ ಮತ ಎನಿಸದು. ಹೀಗೆ ಮತ ಚಲಾಯಿಸಿದ ಮತದಾರನೇ ಭ್ರಷ್ಟನಾದಾಗ ಪರಿಣಾಮ ಭ್ರಷ್ಟ ಸರ್ಕಾರವೇ ಬಂದೀತು, ಬೇರೊಂದು ಬರಲಾರದು. ಬೇವು ಬಿತ್ತಿ ಮಾವು ಬೆಳೆಯಲಾಗದು. ಇದು ಸುಪ್ರಸಿದ್ಧ ನೈಸರ್ಗಿಕ ನಿಯಮ. ಅಲ್ಲಿಗೆ ಭ್ರಷ್ಟ ಸರ್ಕಾರದ ಆಯ್ಕೆಗೆ ಮತದಾರನೇ ಕಾರಣನಾದ.

ನಾನು ಮತದಾರನಾಗಿ ನನ್ನ ಕರ್ತವ್ಯ ನಿರ್ವಹಿಸುವವನಾಗಬೇಕೆಂದಿದ್ದರೆ ಈ ವಿಷಯದಲ್ಲಿ ನಾನು ಚಿಂತನಶೀಲನಾಗಬೇಕಾಗುತ್ತದೆ. ಇಂದಿನ ವಾಸ್ತವಿಕ ಸ್ಥಿತಿ ಏನು? ಸರ್ಕಾರ ಮತ್ತು ರಾಜಕೀಯ ಶಕ್ತಿಗಳು ರಾಜಕೀಯ ಪಕ್ಷಗಳ ಕಪಿಮುಷ್ಟಿಯಲ್ಲಿ, ಸೇರಿ ಹೋಗಿದೆ. ಮತ್ತು ಆ ಪಕ್ಷಗಳ ಮೇಲೆ ಕೋಟ್ಯಾಧಿಪತಿಗಳ, ಕ್ರಿಮಿನಲ್‌ಗಳ, ಚತುರ ಕಬಳಿಕೆಯ ದೊರೆಗಳ, ಜಾತಿವಾದಿ ಶಕ್ತಿಗಳ ಉಡದಹಿಡಿತವಿದೆ. ಪಕ್ಷಗಳು ಅಂಥವರಿಂದ ತುಂಬಿ ಹೋಗಿವೆ. ವಾಸ್ತವಿಕ ಸ್ಥಿತಿಯೇ ಹೀಗಿರುವಾಗ ಈ ಇಬ್ಬರ ಶಕ್ತಿಕೂಟ ಸೇರಿ ನಿರ್ಣಯಿಸಿದ ಉಮೇದುವಾರರಿಗಷ್ಟೇ ನಾವು ಮತ ಹಾಕ ಬೇಕಾಗುತ್ತದೆ. ಒಂದರ್ಥದಲ್ಲಿ ನನ್ನ ಮತ ಅಲ್ಲಿಯೇ ನಿರ್ಬಂಧಿತ ಆಗಿ ಹೋಯಿತು.

ನಾನು ಮತದಾರ ಇರುವುದೇತಕ್ಕೆ? ನಿಂತ ನಿಂತವರಿಗೆಲ್ಲ ಮತ ಹಾಕಲಿಕ್ಕೊ? ಪ್ರಜಾತಂತ್ರವನ್ನು ಮನಬಂದಂತೆ ತಿರುಚುವವರಿಗೆಲ್ಲ ಮತಹಾಕಲಿಕ್ಕೊ ನಾನಿರುವುದು? ನಾನು ಅಸಹಾಯಕ, ಮೂಕ, ಯಾಂತ್ರಿಕ ಮತದಾರ ನೆನಸಿಕೊಂಡಿರಬೇಕೆಂದು ಈ ಪದ್ಧತಿ, ಈ ಸರ್ಕಾರ ಮತ್ತು ಈ ಪಕ್ಷಗಳು ಬಯಸುತ್ತವೊ? ಇದು ಬಹು ಅಸಹನೀಯ

ಸ್ಥಿತಿ. ನನ್ನ ಪ್ರತಿನಿಧಿಯಾಗಬೇಕಾದವನು ಬೇರೆ ಯಾರಿಂದಲೋ ನಿಲ್ಲಿಸಲ್ಪಟ್ಟವನು. ಆತನ ಆಯ್ಕೆಯಲ್ಲಿ ನನ್ನದೇನೂ ಪಾತ್ರವಿಲ್ಲ. ಹೀಗಾಗಿ ಅವನಿಗೋ ಅಂವನಂಥವರ ಪೈಕಿ ಮತ್ತೊಬ್ಬರಿಗೋ ಮತ ಹಾಕಬೇಕು ಅಥವಾ ಮತಹಾಕದಿರಬೇಕು. ಇದು ಬಿಟ್ಟು ಬೇರೆ ಮಾರ್ಗವೇ ನನಗೆ ದೊರಕದಂತಾಗಿ ನನ್ನ ನಿಜವಾದ ಮತ ಅರ್ಥಾತ್ ಅಭಿಪ್ರಾಯ ವ್ಯಕ್ತವಾಗದೇ ಹೋಗುತ್ತದೆ. ಇದು ನನ್ನ ಎರಡನೇ ಅಸಹಾಯ ಸ್ಥಿತಿ. ಸರ್ಕಾರ, ಚುನಾವಣಾ ಆಯೋಗ ಇತ್ಯಾದಿ ಎಲ್ಲರ ಪಲ್ಲವಿ ಅನುಪಲ್ಲವಿಯಂತೆ ಬರುವ ಹೇಳಿಕೆ ಏನು? ಸ್ವತಂತ್ರ ನ್ಯಾಯಸಮ್ಮತ ಮತ್ತು ನಿಷ್ಪಕ್ಷ ಚುನಾವಣೆಗಳಲ್ಲವೆ? ಅದಕ್ಕೆ ಅವರೇ ತಯಾರಿಲ್ಲ. ಅವರೇ ಆಸ್ಪದ ಕೊಡದೇ ಅಡ್ಡಿಯಾಗಿರುವುದು. ಇದು ಮೂರನೇ ಅಸಹಾಯ ಸ್ಥಿತಿ.

ಮೇಲಿನ ಮೂರೂ ಅಸಹಾಯ ಸ್ಥಿತಿಯನ್ನು ಮೆಟ್ಟಿಯೊ, ಮೀರಿಯೇ ಬೇರೊಂದು ಕ್ರಾಂತಿಕಾರಿ ದಾರಿಯನ್ನು ಸರ್ವೋದಯ ವಿಚಾರ ದೃಷ್ಟಿಯಲ್ಲಿ ಈ ತೃತೀಯ ಮಾರ್ಗದ ಶೋಧನೆ ಇಂದಿನ ಪರಮ ಕರ್ತವ್ಯ. ನಿಂತಿರುವವರಲ್ಲಿ ಇವರು ಯಾರೂ ನನ್ನ ಪ್ರತಿನಿಧಿಯಾಗಲು ಯೋಗ್ಯರಲ್ಲ ಆದ್ದರಿಂದ ಇವರನ್ನು ತಿರಸ್ಕರಿಸಿದ್ದೇನೆ ಎನ್ನುವ ಮತವೇ, ದಾಖಲಾಗಬೇಕು. ಮತಚೀಟಿಯಲ್ಲಿ ಅದಕ್ಕಾಗಿ ಪ್ರತ್ಯೇಕ ಕಾಲಂ ಇರಬೇಕು. ಅದರಲ್ಲಿ ನಾನು ನನ್ನ ಅಭಿಪ್ರಾಯವನ್ನು ನಮೂದಿಸುವಂತಿರಬೇಕು ಅಥವಾ ಪ್ರಿಸೈಡಿಂಗ್ ಆಫೀಸರ್ ಬಳಿ ನನ್ನ ಅಭಿಪ್ರಾಯ ದಾಖಲಾಗಬೇಕು. ನಾನು ನನ್ನ ಪವಿತ್ರ ಮತಾಧಿಕಾರವನ್ನು ಹಿಡಿದಿಟ್ಟುಕೊಂಡಿದ್ದೇನೆ ಎಂದು ಗೊತ್ತಾಗಬೇಕು, ದಾಖಲಾಗಬೇಕು. ಈ ಮೂರರಲ್ಲಿ ಒಂದು ವಿಧವಾಗಿ ನನ್ನ ಅಭಿಪ್ರಾಯ ವ್ಯಕ್ತವಾಗಬೇಕು. ಆದರೆ ಇದೆಲ್ಲಕ್ಕೆಲ್ಲ ನನಗೆಲ್ಲಿ ಸ್ವಾತಂತ್ರ್ಯ? ವಾಸ್ತವವಾಗಿ ನನಗೆ ಎಲ್ಲ ಸ್ವಾತಂತ್ರ್ಯ, ಹಕ್ಕು ಇದೆ. ಅದಕ್ಕೆ ಅವಕಾಶ ಕಲ್ಪಿಸಿಕೊಡಬೇಕಾದವರು ಚುನಾವಣಾ ಆಯೋಗ. ಆಯೋಗ ಇದಕ್ಕೆ ಸಿದ್ಧವಿದೆ ಮತ್ತು ಅನುಕೂಲವಿದೆ. ಆಯೋಗಕ್ಕೆ ಸ್ವಾತಂತ್ರ್ಯವಿದ್ದಲ್ಲಿ ಅದು ಏನು ಮಾಡುತ್ತಿತ್ತೆಂದು ತಿಳಿಸುವ ಹೇಳಿಕೆ ಪ್ರಕಟವಾಗಿದೆ. ೨-೩-೨೦೦೪ ನೇ ದಿನದ ಹಿಂದೂ ಪತ್ರಿಕೆಯ ವರದಿಯ ಪ್ರಕಾರ "The chief election commissioner T.S.Krishnamnurthy told press persons while releasing the poll schedule on Sunday that "If we had our way we would have had none of the above column in the ballot paper for the voters so that they could reject all the candidates in case they found them unfit to be their representative. But the Government wanted to convene an all party meeting to arrive at a decision in this regard, he added". ಮುಖ್ಯ ಆಯುಕ್ತರ ಹೇಳಿಕೆ ಸ್ವಯಂ ಸ್ಪಷ್ಟ. ಅದು ಸಿದ್ಧವಿದ್ದೂ ಅದಕ್ಕೆ ಸ್ವಾತಂತ್ರ್ಯವಿಲ್ಲವೆಂದು ವ್ಯಕ್ತವಾಗುತ್ತದೆ. ಸರ್ಕಾರವೆಂದರೇನು? ಅದೂ ಸಹ ಒಂದು ಪಕ್ಷ ಅಥವಾ ಹಲವು ಪಕ್ಷಗಳ ಸಮ್ಮಿಶ್ರಣವೇ ತಾನೆ? ತಾನು ಹತ್ತಿ ನಿಂತಿರುವ ಮರದ ಕೊಂಬೆಯನ್ನು ತಾನೇ ಕತ್ತರಿಸಹೋದೀತೆ? ಆದ್ದರಿಂದ ಪಕ್ಷಗಳ ಸಮೂಹದಿಂದ ರಚಿಸಲ್ಪಟ್ಟ ಸರ್ಕಾರ ಹಾಗೆ ಮಾಡಲು ಅವಕಾಶ ಕೊಡುವುದಿಲ್ಲವೆಂದು ಸಹ ಸ್ಪಷ್ಟ. ತಮ್ಮ ಹಿತಕ್ಕೆ ವಿರೋಧವಾಗಿ ಕಾರ್ಯ ಮಾಡಲು ಆವು ಹೇಗೆ ಮುಂದಾದಾವು? ಆ ಪಕ್ಷಗಳ ಕಡೆ ಕೈ ತೋರಿಸಿ ಸರ್ಕಾರ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಂಡಿದೆ.

ಚುನಾವಾಣಾ ಆಯೋಗವೇನೋ ಈ ಸಲಹೆಕೊಟ್ಟು ಸರ್ಕಾರಕ್ಕೆ ಪತ್ರ ಬರೆದಿದೆ ಎಂದು ತಿಳಿಸಿತು. ಆದರೆ ಸರ್ಕಾರ ಯೋಗ್ಯ ಕ್ರಮ ಕೈಗೊಂಡೀತೆಂದು ಹೇಳಲಾಗದು. ರಾಜಕೀಯ ಪಕ್ಷಗಳಿಗೆ ಮತದಾರರ ಭಯವಿದೆ. ಜನತೆಯಲ್ಲಿ ವ್ಯಾಪಕ ಅಸಂತೋಷ, ಅಸಂತೃಪ್ತಿ, ಬಲವಾದ ವಿರೋಧ, ಜಿಗುಪ್ಸೆ, ರೋಷ ಇವು ಬಹು ಆಳವಾಗಿ ಬೇರೂರಿರುವುದು ಗುಪ್ತಗಾಮಿನಿಯಾಗಿದೆ. ಅವೆಲ್ಲ ಮತಚೀಟಿಯ ಕಾಲಂನಲ್ಲಿ ವ್ಯಕ್ತವಾದುದೆ. ಇವು ಯಾವ ಚರ್ಚೆ–ವಿವಾದಗಳಿಗೆ ಸಂಬಂಧಪಡದೇ ಇದ್ದಾಗ್ಯೂ ಸಾಮಾನ್ಯತಃ ೩೦ ರಿಂದ ४೦ ಜನ ಮತ ಹಾಕುವುದೇ ಇಲ್ಲ. ಇವರಿಗೆ ಮತಹಾಕದಿರಲು ನಾನಾ ಕಾರಣಗಳಿರಬಹುದು. ಅವರಲ್ಲಿ ಬಹುದೊಡ್ಡ ಸಮೂಹ ತಿಳಿದವರು, ಕಲಿತವರು. ಅವರಲ್ಲಿ ಜಿಗುಪ್ಸೆ, ತಾತ್ಸಾರ, ಚುನಾವಣೆ ಪ್ರಕ್ರಿಯೆ, ಸರ್ಕಾರದ ರಾಜಕೀಯ ಧುರೀಣರ ಬಗೆಗೆ ಅಸಹ್ಯ, ಅಪನಂಬಿಕೆಯ ಭಾವನೆಯ ಅಂತಃಪ್ರವಾಹ ಹರಿಯುತ್ತಿದೆ. ಅವೆಲ್ಲ ವ್ಯಕ್ತವಾದರೆ, ಅದು ತಮ್ಮ ಮುಖಕ್ಕೆ ಹಿಡಿದ ಕನ್ನಡಿಯಂತಾಗುತ್ತದೆ ಎಂಬ ಭೀತಿ ಪಕ್ಷಗಳಿಗಿದೆ. ಆದ್ದರಿಂದ ಅವು ಆಯೋಗದ ಸಲಹೆಗೆ ತಡೆಯೊಡ್ಡದೇ ಇರುವುದಿಲ್ಲ. ಅವು ತಮ್ಮದೇ ಆದ ಭದ್ರಕೋಟೆಯನ್ನು ನಿರ್ಮಿಸಿಕೊಂಡು ಅಲ್ಲಿ ಸುರಕ್ಷಿತರೆಂದೂ, ಜನಸಮೂಹ ತಮ್ಮೊಡನೆ ಇದೆಯೆಂದೂ ಭಾವಿಸಿ, ಭ್ರಮಿಸಿ ಕುಳಿತಿವೆ. ರಾಜನೀತಿಜ್ಞರನ್ನು ನಂಬುವವರು ಕೇವಲ ಶೇ ೧೩ರಷ್ಟು ಜನ ಎಂದು ಜಗತ್ತಿನಾದ್ಯಂತ ನಡೆಸಿದ ಸಮೀಕ್ಷೆಯಿಂದ ಗೊತ್ತಾಗಿದೆ. ಈ ಸಮೀಕ್ಷಾವರದಿಯ ಫಲಿತಾಂಶ ೧೭–೯–೨೦೦೫ರ ಹಿಂದೂ ಪತ್ರಿಕೆಯ ಸಂಚಿಕೆಯಲ್ಲಿ ಪ್ರಕಟಿಸಲಾಯಿತು. ಇದರಿಂದ ರಾಜನೀತಿಜ್ಞರು ಭ್ರಮಿತ ಜನರೆಂದು ಗೊತ್ತಾಗಿದೆ. ಆದರೂ ಅವರು ತಮ್ಮ ಭ್ರಮೆ ಬಿಡರು. ಆದುದರಿಂದ ಅವರ ಭದ್ರಕೋಟೆಯನ್ನು ಭೇಧಿಸಬೇಕಾಗಿದೆ. ಅದಕ್ಕೆ ಸ್ವಲ್ಪ ಸಮಯ ಹಿಡಿದೀತು.

ಓಟು ಹಾಕದಿರುವುದು, ನಿಂತ ಉಮೇದುವಾರರ ಪೈಕಿ ಯಾರೂ ನನ್ನ ಪ್ರತಿನಿಧಿಯಾಗಲು ಅರ್ಹರಲ್ಲವೆನ್ನುವುದು. ನನ್ನ ಮತಾಧಿಕಾರವನ್ನು ಹಿಡಿದಿಟ್ಟುಕೊಂಡಿದ್ದೇನೆ ಎನ್ನುವ ಕ್ರಮಗಳು ತೀರ ಅಪರಿಚಿತವೂ, ಎಲ್ಲಿಯೂ ನಡೆಯದ ಕ್ರಮವೇನಲ್ಲ. ರಷ್ಯಾದಲ್ಲಿ ಈ ಪದ್ಧತಿ ಜಾರಿಯಲ್ಲಿದ್ದು ಅಲ್ಲಿಯ ರಾಷ್ಟ್ರಪತಿ ಪುಟಿನ್ನರ ಚುನಾವಣೆ ಇದೇ ಆಧಾದರದ ಮೇಲೆ ನಡೆಯಿತು ಎಂದು ಹಿಂದೂ ಪತ್ರಿಕೆ ತನ್ನ ೧೭–೩–೨೦೦೪ರ ಸಂಚಿಕೆಯಲ್ಲಿ ಬರೆದ ಅಗ್ರ ಲೇಖನದಲ್ಲಿ ತಿಳಿಸಿದೆ:

"They could not explain away a verdict in which the incumbent president has taken over to p.c of the votes cast. Russian voters could have registered their disenchantment with the electrol execise either by staying away from election booths or by indicating on their ballot papers that they did not approve of any of their candidates A turnout of less than 50% of eligible voters would have invalidated their elections...."

ಇನ್ನು ಇದು ಬಿಟ್ಟರೆ ನಮಗಿರುವ ಮಾರ್ಗ ನಮ್ಮ ಅಭಿಪ್ರಾಯವನ್ನು ಪ್ರಿಸೈಡಿಂಗ್ ಅಧಿಕಾರಿಗಳ ಬಳಿ ದಾಖಲು ಮಾಡಿಸುವುದು. ಅದಕ್ಕೆ ಅವಕಾಶ ನೀಡುವ ನಿಯಮವೇ ಇದೆಯೆಂದು ತಿಳಿದು ಬಂದಿದೆ. ಇದು ೧೨. ೩. ೦४ ರ ಹಿಂದೂ ಪತ್ರಿಕೆಯಲ್ಲಿ

ಪ್ರಕಟಗೊಂಡಿದೆ, " the polling officer is bound to record the voters' unwillingness to accept any of the contestants if such a demand arises. This however violates the voters right to secrecy." ಎಂದು ಬರೆದಿದ್ದಾರೆ. ಮತದಾರ ಸ್ವಯಂ ಇಚ್ಛೆಯಿಂದ ತನ್ನ ಅಭಿಪ್ರಾಯವನ್ನು ದಾಖಲಿಸುತ್ತಾನಾದ್ದರಿಂದ ಇಲ್ಲಿ ತನ್ನ ಮತದ ರಹಸ್ಯ ಬಗೆಗಿನನ ಮಮತೆಯ ಪ್ರಶ್ನೆ ಅಪ್ರಸ್ತುತವಾಗುತ್ತದೆ. ಅಲ್ಲದೇ ತನ್ನ ಅಭಿಪ್ರಾಯ ಸಾರ್ವತ್ರಿಕವಾಗಿ ಪ್ರಕಟವಾಗಲೆಂಬ ಉದ್ದೇಶದಿಂದಲೇ ಅದನ್ನು ದಾಖಲಿಚ್ಛಿಸುತ್ತಾನಾದ್ದರಿಂದ, ಮತದ ರಹಸ್ಯಮತೆಯ ಪ್ರಶ್ನೆ ಏಳದು. ಆ ಅಂಶವೇನೂ ಬಾಧಕವೆನಿಸದು. ಅದೇನು ಪ್ರಮುಖ ಅಂಶವೂ ಅಲ್ಲ.

ಅಲ್ಪತೃಪ್ತಿ, ಅಲ್ಪಸಮಾಧಾನದ ಈ ದಾಖಲಿಸುವ ಅಂಶಗಳಿಂದ ಮೇಲೆದ್ದು ಇನ್ನೊಂದು ಗಂಭೀರ ಕ್ರಮದ ಬಗ್ಗೆ ಯೋಚಿಸಲೇ ಬೇಕಾಗಿ ಬಂದಿದೆ. ಅದು ನನ್ನ ಮತಾಧಿಕಾರವನ್ನು ಹಿಡಿದಿಟ್ಟುಕೊಳ್ಳುವುದೊಂದೇ ನನಗೆ ಲಭ್ಯವಿರುವ ನೇರಕ್ರಮ ಮತ್ತು ಸುಲಭೋಪಾಯ. ಲಕ್ಷೋಪಲಕ್ಷ ಜನ ಈ ಮಾರ್ಗಸೂಚಿ ಅನುಸರಿಸಿ ತನ್ಮೂಲಕ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದೇ ಆದರೆ ಅದು ಅಧ್ಭುತ ಪರಿಣಾಮಗಳಿಗೆಡೆಗೊಟ್ಟು ಅದರಿಂದ ಶುಭವೇ ಆದೀತೆಂದು ಆಶಿಸಬಹುದು.

ಮತಹಾಕುವುದು ನನ್ನ ಕರ್ತವ್ಯ, ಯೋಗ್ಯರಿಗೆ ಮತಹಾಕಿ, ಜಾತಿ ಆಧಾರದ ಮೇಲೆ ಮತ ಹಾಕದೆ ಗುಣ ಸಂಪನ್ನರೆನಿಸಿದವರಿಗೆ ಮತಹಾಕಿ, ಪಕ್ಷನೋಡಬೇಡಿ ವ್ಯಕ್ತಿಯ ಯೋಗ್ಯತೆಯನ್ನು ನೋಡಿ ಮತಹಾಕಿ ಎಂದೆಲ್ಲ ಬೋಧಿಸುವವರು, ಕರೆನೀಡುವವರು ಅರೆಸತ್ಯದ ಮಾತನ್ನಾಡುತ್ತಿದ್ದಾರೆ. ಮತದಾರರಿಗೆ ಹೀಗೆ ಬೋಧಿಸಿದವರು ಪಕ್ಷಗಳಿಗೇಕೆ ಬೋಧಿಸದೇ ಹೋದರು? ಯೋಗ್ಯರನ್ನೇ ನಿಲ್ಲಿಸಿ ಎಂದೇಕೆ ಪಕ್ಷಗಳಿಗೆ ಹೇಳಲಿಲ್ಲ? ಇಂಥ ಚರ್ವಿತ ಚರ್ವಣದ ಕರೆಗಳಿಂದ ಮತದಾರನ ಮುಂದಿರುವ ಮೂಲಭೂತ ಪ್ರಶ್ನೆಗಳ, ಸಮಸ್ಯೆಗಳ ನಿರಸನವಾಗದು. ಮತದಾರನನ್ನು ಬಹುದೂರ ಒಯ್ಯಲಾರವು. ಲೇಖನದಲ್ಲಿ ಚರ್ಚಿಸಿರುವ ಮೂಲಭೂತ ಪ್ರಶ್ನೆಗಳ, ಸಮಸ್ಯೆಗಳ ನಿರಸನವಾಗದು. ಮತದಾರನನ್ನು ಬಹದೂರ ಒಯ್ಯಲಾರವು. ಲೇಖನದಲ್ಲಿ ಚರ್ಚಿಸಿರುವ ಮೂಲಭೂತ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವ ಕ್ರಮವಾಗಿ ನನ್ನ ಮತಾಧಿಕಾರವನ್ನು ಹಿಡಿದಿಟ್ಟುಕೊಳ್ಳಬೇಕಾದ ಅನಿವಾರ್ಯ ಕ್ರಾಂತಿಕಾರಿ ಹೆಜ್ಜೆ ಇಡಬೇಕಾಗಿ ಬಂದಿದೆ. ದೇಶದ ರಾಜಕಾರಣದ ಮೇಲೆ ಇರುವ ಹಾನಿಕಾರಕ ಶಕ್ತಿಗಳ ಉಡದ ಹಿಡಿತವನ್ನು ತಪ್ಪಿಸಬೇಕಾದರೆ ಇಂಥ ಕ್ರಮ ಅನುಸರಿಸುವುದು ನನ್ನ ಧರ್ಮ ಮತ್ತು ಕರ್ತವ್ಯವಾಗುತ್ತದೆ. ಇದೇನೂ ಪಲಾಯನವಾದ, ಹೇಡಿತನ, ವಿಮುಖತೆ, ಮೌನದ ಅಥವಾ ಸೋಗುಕಾಕುವಿಕೆಯಲ್ಲ. ಇದು ನನ್ನ ಸತ್ಯಾಗ್ರಹೀ ಕ್ರಮ. ನಾನಾರಿಸಿಕೊಂಡ ದೃಢ ನಿಲುವು. ಎಷ್ಟು ಕಾಲ ಮತಾಧಿಕಾರವನ್ನು ಹಿಡಿದಿಟ್ಟುಕೊಂಡಿರುವಿರಿ? ಆಮೂಲಾಗ್ರ ಚುನಾವಣಾ ಸುಧಾರಣೆಗಳಾಗುವವರೆಗೆ, ಅತಿ ಸಾಮಾನ್ಯ ಯೋಗ್ಯ ನಾಗರಿಕನೂ ಚುನಾವಣೆಗೆ ನಿಂತು, ಆರಿಸಿ ಬರುವಂತಾಗುವವರೆಗೆ. ನನ್ನ ಮತ ನಿರ್ಭಯ, ನಿಷ್ಪಕ್ಷ ಮತ್ತು ನಿರ್ವೈರ ಭಾವನೆಯಿಂದ, ಅನಪೇಕ್ಷಣೀಯ ಕಟ್ಟುಪಾಡುಗಳಿಂದ ಬಂಧಿತವಾಗದ ಮುಕ್ತ ಸ್ಥಿತಿಯಲ್ಲಿ ಚಲಾಯಿಸುವಂತಾಗುವವರೆಗೆ, ನನ್ನ ಮತಾಧಿಕಾರ ಹಿಡಿದಿಟ್ಟಿರುವೆನು.

* * *

ಜನಪದ ವ್ಯಕ್ತಿ

ನಮ್ಮ ಮಧ್ಯದಲ್ಲಿರುವ ಗಾಂಧಿ ತಲೆಮಾರಿನ ವ್ಯಕ್ತಿ : ಟಿ. ಕೇಶವಮೂರ್ತಿ

[ಮಹಾತ್ಮಗಾಂಧಿ ಹಾಗೂ ಆಚಾರ್ಯ ವಿನೋಬಾಜಿಯವರ ಸರ್ವೋದಯ ಕಾರ್ಯಕ್ರಮಗಳಿಂದ ಪ್ರಭಾವಿತರಾಗಿ, ಇವರು ಹಾಕಿ ಕೊಟ್ಟ ಮಾರ್ಗದಲ್ಲಿ ಬಹು ದೂರ ಕ್ರಮಿಸುತ್ತಾ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಇಂದಿಗೂ ತಮ್ಮ ೯೪ರ ವಯಸ್ಸಿನಲ್ಲಿ ಸದಾ ಕ್ರಿಯಾಶೀಲರಾಗಿರುವ ತಗಡೂರು ಕೇಶವಮೂರ್ತಿಯವರ ಕಿರು ಪರಿಚಯ.]

ಟಿ.ಕೇಶವಮೂರ್ತಿಯವರು ೧೯೧೮ ರಲ್ಲಿ ತಗಡೂರಿನಲ್ಲಿ ಜನಿಸಿದರು. ಬಾಲ್ಯವು ಸಹಜವಾಗಿಯೇ ತುಂಟತನದಿಂದ ಕೂಡಿದ್ದರೂ ಹಿರಿಯರ ಅಣತಿಯಂತೆ ವೈಚಾರಿಕ ವಿಷಯಗಳನ್ನು ಅರಿತುಕೊಂಡು ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಹೆಚ್ಚು ಆಸಕ್ತಿಯನ್ನು ಬೆಳೆಸಿಕೊಂಡರು. ೧೯೩೪ ರ ಜನವರಿ ಮಾಹೆಯಲ್ಲಿ ತಮ್ಮ ಗ್ರಾಮಕ್ಕೆ ಭೇಟಿ ನೀಡಿದ್ದ ಮಹಾತ್ಮ ಗಾಂಧೀಜಿಯವರನ್ನು ತುಂಬಾ ಹತ್ತಿರದಿಂದ ಕಂಡು ಪುಳಕಿತರಾಗಿ ಅವರ ಪ್ರಭಾವಕ್ಕೆ ಒಳಗಾಗಿ ತಮ್ಮ ೨೦ ನೇ ವಯಸ್ಸಿನಲ್ಲಿಯೆ ಖಾದಿ ಕೆಲಸಕ್ಕೆ ತಮ್ಮನ್ನು ತೊಡಗಿಸಿಕೊಂಡರು. ಅಂದು ಮಹಾತ್ಮ ಗಾಂಧಿಯವರ ಮೇಲಿನ ಅತಿ ಪ್ರೀತಿಯಿಂದಾಗಿ ಐದು ರೂ ನೀಡಿ ಅವರ ಹಸ್ತಾಕ್ಷರವನ್ನು ಪಡೆದುಕೊಂಡಿದ್ದರು.

ಗಾಂಧೀಜಿಯವರ ಆಶ್ರಮ ಜೀವನ ಹಾಗೂ ಸರ್ವೋದಯ ಕಾರ್ಯಕ್ರಮಗಳಲ್ಲಿ ಆಸಕ್ತಿವುಂಟಾಗಿ ಮಗನವಾಡಿಯ ವಾರ್ಧಾಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿ ನೀಲಗಿರಿಯ ಆದಿವಾಸಿ ಜನಾಂಗದ ಆರೀ ಬುರ್ಲಿ ಹಾಗೂ ಕುಮಾರ ಪಂಗಣನ್ ಎಂಬುವವರ ಜೊತೆ ಸೇರಿ ಹರಿಜನರ ಕಾಲೋನಿಯ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ವೇಳೆಯಲ್ಲಿ ಸೇವಾ ಆಶ್ರಮಕ್ಕೆ ಭೇಟಿಕೊಟ್ಟಿದ್ದ ಮೂಲ ಶಿಕ್ಷಣ ಸಂಘದ ಅಧ್ಯಕ್ಷರಾದ ಸಿಲೋನಿನ ಶ್ರೀ ಆರ್ಯನಾಯಕಂ, ಜವಹಾರ್ ಲಾಲ್ ನೆಹರು, ಅಬ್ದುಲ್ ಕಲಾಮ್ ಆಜಾದ್‌ರವರನ್ನು ಹತ್ತಿರದಿಂದ ನೋಡುವ ಭಾಗ್ಯ ಕೇಶವಮೂರ್ತಿಯವರದಾಗುತ್ತದೆ. ಮಗನವಾಡಿಯಲ್ಲಿದ್ದ ೬೦ ದಿನಗಳ ಕಾಲದಲ್ಲಿ ಪ್ರತಿವಾರ ಗಾಂಧೀಜಿಯವರ ದರ್ಶನ ಮತ್ತು ಉಪದೇಶಕ್ಕಾಗಿ ಸೇವಾಗ್ರಾಮ ಆಶ್ರಮಕ್ಕೆ ಹೋಗಿ ಬರುತ್ತಿದ್ದರು. ಈ ಸಮಯದಲ್ಲಿಯೇ ಅಲ್ಲಿ ನಡೆಯುತ್ತಿದ್ದ ಖಾದಿ ಗ್ರಾಮೋದ್ಯೋಗ ಕೈಗಾರಿಕೆಗಳಲ್ಲಿ ಪ್ರಾವಿಣ್ಯತೆಯನ್ನು ಪಡೆದುಕೊಂಡು ಅಲ್ಲಿಂದ ಹಿಂದಿರುಗಿದರು.

ನಂತರ ಹೈದರಾಬಾದಿನ ಶಿವರಾಮಪಲ್ಲಿ ಎಂಬಲ್ಲಿ ಸರ್ವೋದಯ ಸಂಘದಲ್ಲಿ ಕೈಗಾರಿಕೆಗಳನ್ನು ನಡೆಸಲು ಕಾರ್ಯಕರ್ತರು ಬೇಕಾಗಿದ್ದಾರೆಂಬ ವಿಷಯ ತಿಳಿದು ತಮ್ಮ ಬೆಂಗಳೂರಿನ ಕಛೇರಿಗೆ ಎರಡು ತಿಂಗಳುಗಳ ರಜೆ ಪಡೆದು ಅಲ್ಲಿಗೆ ತೆರಳುತ್ತಾರೆ. ಈ ಅವಧಿಯಲ್ಲಿಯೇ ಅಲ್ಲಿ ಎರಡನೆ ಅಖಿಲ ಭಾರತ ಸರ್ವೋದಯ ಸಂಘದ ಅಧಿವೇಶನ

ನಡೆದು ಆಚಾರ್ಯ ವಿನೋಬಾಜಿ ಮತ್ತು ಜೆ.ಸಿ. ಕುಮಾರಪ್ಪನವರು ಹಾಗೂ ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಗಾಂಧೀಜಿಯವರ ಅನುಯಾಯಿಗಳನ್ನು ಮಾತನಾಡಿಸುವ ಕೆಲಕಾಲ ಅವರೊಟ್ಟಿಗೆ ಇರುವ ಸುಯೋಗ ಒದಗಿ ಬರುತ್ತದೆ. ಅಲ್ಲದೆ ಈ ಅಧಿವೇಶನ ಯಶಸ್ವಿಯಾಗಿ ನಡೆಯಲು ಕೇಶವಮೂರ್ತಿಯವರ ಪಾತ್ರ ಪ್ರಮುಖವಾಗುತ್ತದೆ. ೧೯೫೩ ನೇ ಇಸವಿಯವರೆಗೆ ಶಿವರಾಮಪೆಲ್ಲಿಯಲ್ಲಿದ್ದು ನಂತರ ಅಲ್ಲಿಂದ ಹಿಂದಿರುಗಿ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ಅನುಗ್ರಹದಿಂದ ತಗಡೂರಿನಲ್ಲಿ ಗಾಂಧಿ ಸ್ಮಾರಕ ನಿಧಿಯ ಆಶ್ರಯದಲ್ಲಿ 'ಗ್ರಾಮ ಸೇವಾ ಕೇಂದ್ರ' ಹೆಸರಿನಲ್ಲಿ ಖಾದಿಕೆಲಸವನ್ನು ಪ್ರಾರಂಭಿಸುತ್ತಾರೆ. ಈ ಎಲ್ಲಾ ಕಾರ್ಯಗಳಿಗೆ ಖಾದಿ ಸಂಸ್ಥೆಯು ಕಟ್ಟಡಗಳನ್ನು ಬಿಟ್ಟುಕೊಟ್ಟು ಶ್ರೀ ರಾಮಚಂದ್ರರಾಯರು ಇವರಿಗೆ ತುಂಬಾ ಸಹಕಾರ ನೀಡುತ್ತಾರೆ. ನಾಲ್ಕು ವರ್ಷಗಳ ನಂತರ ರಾಮಚಂದ್ರರಾಯರ ಮತ್ತು ಗ್ರಾಮಸ್ಥರ ಸಹಕಾರದೊಂದಿಗೆ ಆಚಾರ್ಯ ವಿನೋಬಾಜಿಯವರ ಕರ್ನಾಟಕ ಪ್ರವಾಸ ಕಾಲದಲ್ಲಿ ತಗಡೂರಿಗೆ ಭೇಟಿ ನೀಡಿದ್ದಾಗ ನಡೆಸಿದ ಹತ್ತು ದಿನಗಳ ಶಿಬಿರವನ್ನು ಯಶಸ್ವಿಯಾಗಿ ನಿಭಾಯಿಸುತ್ತಾರೆ.


ಈ ಹಿಂದೆ ಮಗನವಾಡಿಯಲ್ಲಿ ಗ್ರಾಮದ್ಯೋಗ ಕೈಗಾರಿಕೆಯಲ್ಲಿ ಪಡೆದಿದ್ದ ಪ್ರಾವಿಣ್ಯತೆಯನ್ನು ಸದುಪಯೋಗ ಪಡಿಸಿಕೊಂಡು ೧೯೬೦ ರಲ್ಲಿ ಪುನಃ ಕೈಕಾಗದ ಕಾರ್ಯವನ್ನು ಆಧುನಿಕ ಸಲಕರಣೆಗಳೊಂದಿಗೆ ಪ್ರಾರಂಭಿಸಿ ಉತ್ತಮ ದರ್ಜೆಯ ಕಾಗದ ತಯಾರಿಸಿ ಮೈಸೂರು ಸರ್ಕಾರ, ಇಂಡಿಯಾ ಸರ್ಕಾರದ ಸ್ಟೇಷನರಿ ವಿಭಾಗದ ಕಲ್ಕತ್ತಕ್ಕೆ ಪೂರೈಕೆ ಮಾಡುತ್ತಾರೆ. ಈ ಕಾರ್ಯವನ್ನು ಹಲವು ವರ್ಷಗಳ ಕಾಲ ನಡೆಸಿಕೊಂಡು ಬರುತ್ತಾರೆ. ನಂತರ ರಾಜ್ಯಾದ್ಯಾಂತ ಇರುವ ಖಾದಿ ಗ್ರಾಮೋದ್ಯೋಗ ಕೇಂದ್ರಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಲಹೆ, ಸೂಚನೆಗಳನ್ನು ಕೊಡುತ್ತಾ ನೂಲುಗಾರರು ಹಾಗೂ ನೇಯ್ಗೆಯವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕಿಸಿಕೊಡುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡು ಇಂದಿಗೂ ನಮ್ಮ ನಡುವೆ ೯೪ರ ಇಳಿವಯಸ್ಸಿನಲ್ಲೂ ಸಹ ತಮ್ಮ ಮನೆಯಲ್ಲಿಯ ಕೈತೋಟವನ್ನು ನೋಡಿಕೊಂಡು ಕ್ರಿಯಾಶೀಲವಾಗಿದ್ದಾರೆ. ಮಹಾತ್ಮಗಾಂಧೀಜಿಯವರಿಗೆ ಕೊಟ್ಟ ವಚನದಂತೆ ೪೦-೪೫ ವರ್ಷಗಳ ಕಾಲ ಸಮಾಜ ಸೇವೆ ಮಾಡಿದ ತೃಪ್ತಿಯೊಂದಿಗೆ ತಮ್ಮ ವೃದ್ಧಾಪ್ಯ ಜೀವನವನ್ನು ಸಂತೋಷದಿಂದ ನಡೆಸುತ್ತಿದ್ದಾರೆ. ಇವರ ಸರಳ ಜೀವನ, ನಡೆದು ಬಂದ ದಾರಿ, ಕೈಗೊಂಡ ಅನೇಕ ಸರ್ವೋದಯ ಕಾರ್ಯಕ್ರಮಗಳನ್ನು ಒಳ ಹೊಕ್ಕು ನೋಡಿದಾಗ ಇಂದಿನ ಯುವಕರು ಟಿ.ಕೇಶವಮೂರ್ತಿಯವರು ಹಾಕಿದ ಹೆಜ್ಜೆಯ ದಿಕ್ಕನ್ನು ಹಿಂಬಾಲಿಸಿಕೊಂಡು ಹೋಗುವ ಕಾಲ ಈಗ ಬಂದೊದಗಿದೆ ಎಂದು ಅನಿಸದೆ ಇರದು.

(ಸಂಗ್ರಹ : ಮಹೇಶ್)

* * *

ಜನಪದ ನಿಲಯದ ಅಂತರಂಗದಲ್ಲಿ . . . ೫೫

– ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟ್ ವಿವಿಧ ದೇಶಗಳ, ವಿವಿಧ ಸ್ವಯಂಸೇವಕರ ಸೇವೆಯನ್ನು ಪಡೆದು ಬೆಳೆದಂಥ ಸಾರ್ವಜನಿಕ ಸಂಸ್ಥೆಯಾಗಿದೆ. ಈಗಲೂ ಸಹ ಆಗಾಗ್ಗೆ ಸ್ವಯಂಸೇವಕರಾಗಿ ಕೆಲಸ ಮಾಡಲು ಹಲವಾರು ದೇಶಗಳ ಯುವಕರು ತಮ್ಮ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಸ್ವಯಂ ಸೇವಕರ ಆಗಮನವು ೬೦ ರ ದಶಕದಲ್ಲಿ ಹೆಚ್ಚಾಗಿದ್ದಿತು. ಆ ದಶಕವು ಟ್ರಸ್ಟಿನ ಅಂಕುರಾರ್ಪಣೆಯ ಕಾಲವಾಗಿದ್ದಿತು. ಹೀಗಾಗಿ ಸ್ವಯಂಸೇವಕರ ಸೇವೆಯನ್ನು ಮತ್ತು ಆ ಸ್ವಯಂಸೇವಕರ ವ್ಯಕ್ತಿ ಚಿತ್ರಣವನ್ನು ಮತ್ತು ತದನಂತರದ ಅವರ ಜೀವನದ ಬೆಳವಣಿಗೆಯ ಕ್ರಮಬದ್ಧವಾದ ದಾಖಲೆಯನ್ನು ಮಾಡಲಿಕ್ಕಾಗಿಲ್ಲ. ಇದೊಂದು ದೊಡ್ಡ ಕೊರತೆಯೆಂದೆ ಭಾವಿಸಬಹುದು. ಈಗ ಬಹಳಷ್ಟು ಕಾಲ ಗತಿಸಿದ ಮೇಲೆ ಮತ್ತು ಟ್ರಸ್ಟ್ ತನ್ನ ಜೀವಿತದ ೫೦ ವರ್ಷಗಳನ್ನು ಕಳೆದ ಮೇಲೆ ಆ ಸ್ವಯಂಸೇವಕರು ಎಲೆಯ ಮರೆಯಲ್ಲಿದ್ದಂಥ ಸಿಹಿ ಮಾವಿನಹಣ್ಣಿನಂತೆ ನೆನಪಿಗೆ ಬರುತ್ತಾರೆ. ಈಗ್ಗೆ ೧೩ ವರ್ಷಗಳ ಹಿಂದೆ ಟ್ರಸ್ಟಿನ ದಾನಿಗಳು, ಅಭಿಮಾನಿಗಳು ಮತ್ತು ಹಿತೈಷಿಗಳ ಜೊತೆಗೆ ಸಂಪರ್ಕವನ್ನಿರಿಸಿಕೊಳ್ಳುವುದಕ್ಕಾಗಿ 'ಜನಪದ ಸೇವಾ' ಎಂಬ ಹೆಸರಿನಲ್ಲಿ ದ್ವೈಮಾಸಿಕ ವಾರ್ತಾಪತ್ರವನ್ನು ಪ್ರಕಟಿಸಲಾಗುತ್ತಿತ್ತು. ಇತ್ತೀಚಿಗೆ ಆಕಸ್ಮಾತ್ತಾಗಿ ಜನಪದ ಸೇವಾದ ಒಂದು ಹಳೆಯ ಸಂಚಿಕೆ ಕೈಗೆ ದೊರೆಯಿತು. ಆ ಸಂಚಿಕೆಯ ಒಳಗಿನ ವಿಷಯಗಳನ್ನು ಗಮನಿಸುತ್ತಿದ್ದಾಗ ಸುಮಾರು ೧೩–೧೪ ವರ್ಷಗಳ ಹಿಂದೆ ಟ್ರಸ್ಟ್‌ನಲ್ಲಿ ಸ್ವಯಂಸೇವಕಿಯಾಗಿ ಕೆಲಸ ಮಾಡಿದ್ದ ಓರ್ವ ಜಪಾನಿ ಯುವತಿಯ ಬಗ್ಗೆ ಕೆಲವು ವಿಷಯಗಳು ಪ್ರಕಟವಾಗಿದ್ದು ಕಣ್ಣಿಗೆ ಬಿತ್ತು. ಅದನ್ನು ಓದಿದಾಗ ಆ ಸಮಯದಲ್ಲಿ ಆ ಸ್ವಯಂಸೇವಕಿ ಮಾಡಿದ ಕೆಲಸ ಮತ್ತು ಟ್ರಸ್ಟಿನ ಬೆಳವಣಿಗೆಗಳಿಗೆ ಕೊಟ್ಟ ಸ್ಥೈರ್ಯ ಎಲ್ಲವೂ ಕೃತಜ್ಞಾತಾ ಭಾವದಿಂದ ನೆನಪಾಗುತ್ತದೆ. ಜನಪದ ಸೇವಾದಲ್ಲಿ ಆ ಸ್ವಯಂಸೇವಕಿಯ ಬಗ್ಗೆ ಪ್ರಕಟಗೊಂಡಿದ್ದ ವಿಚಾರಗಳನ್ನು ಯಥಾವತ್ತಾಗಿ ಪುನಃ ಇಲ್ಲಿ ಸ್ಮರಿಸಿಕೊಳ್ಳಲಾಗಿದೆ.

ನೋರಿಕೊಸಾನ್ ಜಪಾನಿ ದೇಶದ ೨೨ ವರ್ಷದ ಯುವತಿ. ೧೯೯೫ ಏಪ್ರಿಲ್ ೧೮ ಕ್ಕೆ ಟ್ರಸ್ಟಿಗೆ ಬಂದಳು. ಈ ಮೊದಲು ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಟ್ರಸ್ಟಿನಲ್ಲಿ ತೋಷಿಮಿಚಿ ಹಿರೋಸೆ ಎಂಬ ಜಪಾನಿನ ಯುವಕನು ಟ್ರಸ್ಟಿನಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ಸ್ವಯಂಸೇವಕನಾಗಿ ಕೆಲಸ ಮಾಡಿದ್ದ. ಈಗ ಹಿರೋಸೆ ಟೋಕಿಯೋದಲ್ಲಿ ತನ್ನ ಸ್ವಂತ ಉದ್ಯಮ ನಡೆಸುತ್ತಿದ್ದಾರೆ. ಹಳೇ ಸಂಬಂಧದಿಂದ ನೋರಿಕೋ ಕೂಡ ಟ್ರಸ್ಟಿಗೆ ಬಂದಳು. ಒಂದೂವರೆ ತಿಂಗಳು ಇದ್ದಳು. ಇವಳು ತನ್ನ ಶ್ರದ್ಧೆ, ಕೆಲಸದಲ್ಲಿಯ ಅಚ್ಚುಕಟ್ಟುತನ ಮತ್ತು ಮೌನ ಸ್ವಭಾವದಿಂದ ಎಲ್ಲರ ಗಮನ

ಸೆಳೆದಳು ಮತ್ತು ಪ್ರೀತಿ ಹಾಗೂ ಗೌರವಕ್ಕೆ ಪಾತ್ರಳಾದಳು. ನೋರಿಕೋಗೆ ಇಂಗ್ಲಿಷ್ ಸರಿಯಾಗಿ ಬರುತ್ತಿರಲಿಲ್ಲ. ಆದ್ದರಿಂದ ಕೂಡಲೆ ಕೆಲವು ಕನ್ನಡ ಶಬ್ದಗಳನ್ನು ಕಲಿತಳು. ಅವಳು ಟ್ರಸ್ಟಿನಲ್ಲಿ ಇದ್ದ ಸಮಯದಲ್ಲಿ ಸ್ಥಳೀಯ ಯುವಕರಿಗಾಗಿ ಬೇಸಿಗೆ ಶಿಬಿರ ನಡೆಯುತ್ತಿತ್ತು. ಆ ಶಿಬಿರದ ಅಡುಗೆ ಮನೆ ಕೆಲಸದಲ್ಲಿ ನೋರಿಕೋ ಬಹಳವಾಗಿ ಸಹಕರಿಸಿದಳು ಬಾವಿಯಿಂದ ನೀರು ಎಳೆದು ಪಾತ್ರೆಗಳಿಗೆ ನೀರು ತುಂಬುವುದು, ಕಸಗುಡಿಸುವುದು, ನೆಲಒರೆಸುವುದು, ಊಟ ಬಡಿಸುವುದು ಇತ್ಯಾದಿ ಕೆಲಸಗಳನ್ನು ಯಾರಿದಂಲೂ ಹೇಳಿಸಿಕೊಳ್ಳದೆ ತಾನೇ ಸಂದರ್ಭ ನೋಡಿ ಮೌನವಾಗಿ ಕೆಲಸ ಮಾಡಿಕೊಂಡಿರುತ್ತಿದ್ದಳು. ಎಷ್ಟೋ ಸಲ ಯಾರಾದರೂ ಬೇಡ ಎಂದರೆ ಅವಳ ಮನಸ್ಸು ಖಿನ್ನವಾಗುತ್ತಿತ್ತು. "ಕರುಣಾಗೃಹ"ದ ಸ್ವಚ್ಛತೆಯಲ್ಲಿ ಭಾಗೀರಥಿಯ ಜೊತೆ ಸೇರಿಕೊಳ್ಳುತ್ತಿದ್ದಳು. ಅಲ್ಲಿಯ ಹುಡುಗರಿಗೆ ಅನೇಕ ವಿಧವಾಗಿ ನೆರವಾಗುತ್ತಿದ್ದಳು. ಸಮಯಕ್ಕೆ ಸರಿಯಾಗಿ ಹಾಜರ್! ಭಾಷೆ ಗೊತ್ತಿಲ್ಲದಿದ್ದರೂ ಭಾಷೆ ತಿಳಿದವರಿಗಿಂತ ಪ್ರಭಾವಶಾಲಿಯಾಗಿ ಕೆಲಸ ಮಾಡುತ್ತಿದ್ದಳು. ಆದ್ದರಿಂದ ಸಲ್ಪ ಸಮಯದಲ್ಲಿಯೇ ಅವಳು ಎಲ್ಲ ಮಕ್ಕಳ ಅಚ್ಚು ಮೆಚ್ಚಿನ "ನೋರಿಕೋ ಅಕ್ಕ" ಆದಳು. ಮುದ್ರಣಾಲಯದಲ್ಲಿ ಕಾಗದ ಮಡಚುವ ಕೆಲಸ ಮಾಡಿದಳು. "ಹೊಸ ಜೀವನ ದಾರಿ"ಗೆ ಹೋಗಿ ಅಲ್ಲಿಯೂ ಸಹ ಗಿರಿಜಮ್ಮನವರ ಕೆಲಸದಲ್ಲಿ ಬಲಗೈ ಬಂಟಳಾಗಿ ಸಹಕರಿಸಿದಳು. ಅಡುಗೆ ಮನೆಕೆಲಸದಿಂದ ಹಿಡಿದು ಹಾಲಿನ ಡೈರಿಗೆ ಒಂದು ಕಿಲೋಮೀಟರ್ ದೂರ ಹೋಗಿ ಹಾಲು ಹಾಕಿ ಬರುವವರೆಗೆ ಎಲ್ಲ ಕೆಲಸ ಮಾಡುತ್ತಿದ್ದಳು. ವ್ಯವಸಾಯದ ಕೆಲಸದಲ್ಲಿಯೂ ಸಹ ಭಾಗಿಯಾಗುತ್ತಿದ್ದಳು. ಅವಳಿಗೆ ವಿಶ್ರಾಂತಿ ಎಂಬುದೇ ಗೊತ್ತಿಲ್ಲ. ಅವಳ ಈ ಕರ್ಮ ನಿಷ್ಠತೆ ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡುತ್ತಿತ್ತು ಮತ್ತು ಸುತ್ತಲಿನವರ ಮೇಲೆ ಒಳ್ಳೆಯ ಪ್ರಭಾವ ಬೀರುತ್ತಿತ್ತು. ಅವಳು ಶಿಬಿರದಲ್ಲಿ ಪಾತ್ರೆಗಳಿಗೆ ನೀರು ತುಂಬುತ್ತಿದ್ದಾಗ ಅವಳ ಕೈ ಜಾರಿ ನೀರು ತುಂಬಿದ ಪ್ಲಾಸ್ಟಿಕ್ ಬಿಂದಿಗೆ ಕೆಳಗೆ ಬಿದ್ದು ಒಡೆದು ಹೋಯಿತು. ಅದಕ್ಕಾಗಿ ಅವಳು ತನ್ನ ಮುಖ ಮುಚ್ಚಿಕೊಂಡು ಕೂತಳು. ಯಾರಾದರೂ ಎದುರಿಗೆ ಬಂದರೆ ಮುಖ ಎತ್ತಿ ನೋಡಲೂ ಸಂಕೋಚ ಪಡುತ್ತಿದ್ದಳು. ಯಾರಿಗೂ ಗೊತ್ತಿಲ್ಲದಂತೆ ಸಾಯಂಕಾಲ ಪೇಟೆಗೆ ಹೋಗಿ ಒಂದು ಹೊಸ ಬಿಂದಿಗೆ ತಂದಿದ್ದಳು. ನೋರಿಕೋ ಮರೆಯಲಾರದ ವ್ಯಕ್ತಿ.

ಇಂಥ ಸೇವಾಭಾವನೆಯ ಸ್ವಯಂಸೇವಕರಲ್ಲಿ ತೊಷಿಮಿಚಿ ಹಿರೋಸೆ, ಜೆಹಾರ್ಡ್, ಮಾರ್ಟಿನ್ ಕೋವಾಯಾಸಿ ಇನ್ನು ಮುಂತಾದ ವ್ಯಕ್ತಿಗಳು ಸ್ಮರಣೆಗೆ ಬರದೆ ಹೋಗುವುದಿಲ್ಲ. ಇವರೆಲ್ಲರಿಗೆ ಟ್ರಸ್ಟ್ ಸದಾಕಾಲ ಆಭಾರಿಯಾಗಿರುತ್ತದೆ. ವಿಷಾದದ ಸಂಗತಿಯೆನೆಂದರೆ ಪಾಶ್ಚಿಮಾತ್ಯ ದೇಶಗಳ ಯುವಕರಲ್ಲಿರುವಂಥ ಸಾಹಸಿ ಪ್ರವೃತ್ತಿಯ ಸೇವಾಭಾವನೆ ಭಾರತೀಯ ಯುವಕರಲ್ಲಿ ಕಂಡು ಬರದೆ ಇರುವುದು. ಇದಕ್ಕೆ ಬಡತನ, ಸಂಕೋಚ, ಪರಂಪರೆ ಇತ್ಯಾದಿಗಳು ಕಾರಣವಾಗಿರಬಹುದು. ಆದರೂ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿಯೂ ವಿದೇಶಿ ಯುವಕರು ಭಾರತದ ಕಡೆಗೆ ಆಕರ್ಷಿತರಾಗಿ ಇಲ್ಲಿಗೆ ಬಂದು ಸೇವೆ ಸಲ್ಲಿಸಿರುವುದು ಒಂದು ವಿಶೇಷ ಸಂಗತಿಯೇ ಸರಿ.

(ಮುಂದುವರಿಯುವುದು.....)

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

೧. ಶ್ರೀ ಎಚ್.ವಿ. ಮಂಜುನಾಥ್, ಬೆಂಗಳೂರು

೨. ಶ್ರೀ ಎಂ.ಜಿ.ಶಿವರಾಂ, ಬೆಂಗಳೂರು

ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಕ್ಕಾಗಿ ಮತ್ತು ಹೊಸದಾಗಿ ಜನಪದ ವಿಚಾರಕ್ಕೆ ಚಂದಾದಾರರಾದ ಶ್ರೀಮತಿ ಕೃಷ್ಣಸ್ವಾಮಿ ಇವರಿಗೆ ಕೃತಜ್ಞತೆಗಳು.

ಜನಪದ ಸೇವಾ ಟ್ರಸ್ಟ್ ಸಮಾಚಾರ

೨೦೦೮ ಮೇ ಮಾಹೆಯ ದಾನಿಗಳು

೧) ಶ್ರೀ ಎ.ಎನ್. ಮೂರ್ತಿ ಮತ್ತು ಶ್ರೀ ಎಸ್. ಶೇಷಾದ್ರಿ ಬೆಂಗಳೂರು

೨) ಶ್ರೀ ಎನ್. ಎಸ್. ಕಾಂತರಾಜ್ ಮೈಸೂರು

೩) ಅಂಬಿಕಾ.ಸಿ. ಬೆಂಗಳೂರು

೪) ಶ್ರೀಮತಿ ಹೆಚ್. ಮೀನಾಕ್ಷಿ ಬೆಂಗಳೂರು

೫) ಶ್ರೀ ಅನಂತಮೂರ್ತಿ ಮೈಸೂರು

೬) ಶ್ರೀ ಎಸ್. ಸಿ. ಪದ್ಮನಾಭಯ್ಯ ಮೈಸೂರು

೭) ಶ್ರೀ ಆರ್.ಎ. ಆನಂದ್ ಮಂಡ್ಯ

೮) ಶ್ರೀಮತಿ ಜಮುನಾ ಪ್ರಕಾಶ್ ಮೈಸೂರು

* * *

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

KA / SK / MND / 470 / 2006-2008
Regd. no. KAR / KAN / 2000 / 3820

ತೆರೆದ-ಅಂಚೆ

ಶ್ರೀಮತಿ/ ಶ್ರೀ..

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.Phone : 08236 – 209016 e-mail : janapada@yahoo.com Printed at Sanketh Mudrana, Melkote.